


ಸಂಪುಟ ೫ | ಫೆಬ್ರವರಿ ೧೯೪೭ | ಸಂಚಿಕೆ ೧೧

ಕುಹಕಿಡಿಗಳು

—o—

ಮಹಾತ್ಮರು ನೌಖಾಲಿಯ ಕಾಲ್ನಡಿಗೆ ಯಾತ್ರೆಯನ್ನು ಮಾಡುತ್ತಿದ್ದಾರೆ.

—ಅಂದರೆ ಬೀಹಾರಿನಲ್ಲಿ ಲೀಗ್ ಮುಂದಾಳುಗಳು ಹೇ - ಹೇ - ಹೈಗೆ ಹೋಗುತ್ತಾರೆ ?

* * * *

ಸದ್ಯ ! ನಾನು 'ಓಟು' ಮಾಡಲಿಲ್ಲಪ್ಪಾ !

ಈಗ ಆ ಸಭೆಯಲ್ಲಿ ಆಗುವಗೊಂದಲಕ್ಕೆ ನಾನು ಸಹಕಾರಿಯಲ್ಲ ಎಂದೆನ್ನಿಸುವುದು ಎಷ್ಟೋ ಹಿತವಾಗಿದೆ ಮನಸ್ಸಿಗೆ—(ಓದುಗರ ಪತ್ರದಿಂದ)

* * * *

ಸ್ತ್ರೀಯರ ವಿಚಾರ ನನಗೆ ಹೇಳಿಕೊಡುಕ್ಕೆ ಬರುತ್ತೀಯಾ –ಪೆಂಗೇ— ನಾನು ಅವರಲ್ಲೊಬ್ಬಳನ್ನು ಕೈಹಿಡಿದಿದ್ದೇನೆ ಕಣೋ ? — (ಒಬ್ಬ ವಿವಾಹಿತಾ ಇನ್ನೊಬ್ಬನಿಗೆ)

* * * *

ಏನ್ ಸಾಹೇಬ್ರೇ ! ಈ ಕಿತ್ತಳೇ ಹಣ್ಣು ಕೊಡಗಿನಿಂದ ತಾವೇ ತರಿಸಿದ್ದೋ ! ಅಥವಾ ಅಲ್ಲಿಂದ ಅದೇ ಗಡೀಪಾರಾಗಿ ಬಂದಿದ್ದೋ ?

* * * *

ಹಲವು ಮುಸ್ಲಿಂ ಲೀಗಿನ ಮುಖಂಡರು ಬಂಧಿಸಲ್ಪಟ್ಟರಂತೆ—

—ಓಹೋ- ಕಾಂಗ್ರೆಸಿನ ಮೇಲು ಪಂಜ್ಞೆ ಚೆನ್ನಾಗಿ ಅನುಸರಿಸುತ್ತಾರೆ.

* * * *

ಕಾರ್ಮಿಕ ಚಳವಳಿಕಾರರಿಗೂ, ಕಾಂಗ್ರೆಸಿಗೂ ಘರ್ಷಣೆ—

—ಯಾವ ಚಳವಳಿಯೂ ನ್ಯಾಯಬಾಹಿರವಾಗದಷ್ಟು ಯಾವ ಸರ್ಕಾರವಾದರೂ ಕಾಯಿದೆ ಕಾಯಬೇಕೆ ?

* * * *

ಒಂದೇ ಪತ್ರಿಕೆಯಲ್ಲಿ ಬಂದ ಸುದ್ದಿಗಳು—

—ರಾಜ್ಯಾಂಗ ಸುಧಾರಣೆಗಳನ್ನು ಏರ್ಪಡಿಸಲು ಶ್ರೀ ... ..ಯ್ಯನವರು ಸಹಾಯಕವಾಗಿ ನೇಮಿಸಲ್ಪಟ್ಟಿದ್ದಾರೆ.

—ಕಾಂಗ್ರೆಸ್ ಮುಂದಾಳು ಶ್ರೀ ಹನುಮಂತಯ್ಯನವರಿಗೆ ೧೫ ತಿಂಗಳು ಕಾರಾಗೃಹ ಶಿಕ್ಷೆ—

* * * *

ಬೆಂಗಳೂರಿನಲ್ಲಿ " ರಾಣುವ ವಾರ " " ಜನವರಿ " ಕೊನೆಯಲ್ಲಿ ಏರ್ಪಾಡಾಯಿತಂತೆ—

—ಇಲ್ಲಿ ಕಾರ್ಮಿಕ ಘರ್ಷಣೆ ಆಗದೇ ಇರಲೆಂದಲ್ಲವಂತೆ.

* * * *

ಅಮೆರಿಕನ್ನ ಸಿಪಾಯಿಯೊಬ್ಬನು ಬಾಯಾಡಿಸುತ್ತಿದ್ದುದನ್ನು ಕಂಡು, ಹುಡುಗನೊಬ್ಬನು, ' ಇದೇನು ಹಸುವಿನ ಹಾಗೆ ಇವನೂ ಮೆಲುಕು ಹಾಕುತ್ತಾನೆ ' ಎಂದು ಕೇಳಿದನಂತೆ—

—ಹಾಗಲ್ಲಾ ! ಮಗೂ ! ಅವನು "ಚೂಯಿಂಗ್ ಗಮ್" ತಿನ್ನುತ್ತಿದ್ದಾನೆ ಎಂದು ಮಾರುತ್ತರ ಬಂತಂತೆ-

* * * *

ಅಂತರಾಷ್ಟ್ರೀಯ ಸಭೆಗೆ ನಾವು ತಲೆ ಬಾಗುವುದಿಲ್ಲ—

ಫೀಲ್ಡ್ ಮಾರ್ಷಲ್ ಸ್ಮಟ್ಸ್—

—ಫ್ರಾಂಕೊ ಒಬ್ಬನೇ ಇದ್ದ- ಒಬ್ಬ ಸಹಚಾರಿ ಸಿಕ್ಕಿದಹಾಗೆ ಆಯಿತಲ್ಲ— ಆಗಲೀ—

* * * *

— o —

ಉರಿಗಾಳು

“ ಒಂದು ಸಲ ಕಾಂಗ್ರೆಸನ್ನೂ ಮತ್ತೊಂದು ಸಲ ಲೀಗನ್ನೂ ಗೌರವಿಸುವ ನೀತಿಯನ್ನು ವೈಸ್ರಾಯರು ತ್ಯಜಿಸಬೇಕು ” (ಪತ್ರಿಕೆ) ದೇವಲ್ಲರಿಗೆ ಒಂದೇ ಕಣ್ಣು ಎಂಬುದನ್ನು ವಿಮರ್ಶಕರು ಮರೆತಿರುವಂತಿದೆ

* * *

ದೇಶೀಯ ಸಂಸ್ಥಾನಗಳ ಪ್ರಚಾರ ಚಿತ್ರಗಳನ್ನು ರಚಿಸಲು ಸ್ಥಾಪಿತವಾದ ಪಬ್ಲಿಸಿಟಿ ಫಿಲ್ಮ್ಸ್ ಅಫ್ ಇಂಡಿಯದ ಪ್ರಾರಂಭೋತ್ಸವವನ್ನು ಸತ್ಯನಾರಾಯಣ ಪೂಜೆಯೊಂದಿಗೆ ನೆರವೇರಿಸಲಾಯಿತು (ಸುದ್ದಿ) ಸರಿಯಾದ ದೇವರು.

* * *

“ ಎರಡು ಪಕ್ಷಗಳ ಸದಸ್ಯರೂ ಈಗ ತೀರ ಹತ್ತಿರಕ್ಕೆ ಬಂದಿದಾರೆ ” (ಸುದ್ದಿ) ...ಹಾಗಾದರೆ, ಅವರನ್ನು ಬೇರ್ಪಡಿಸಲು ಕೂಡಲೇ ಪೋಲೀಸಿನವರನ್ನು ಕಳುಹಿಸಬೇಕಾಗುತ್ತದೆ

* * *

ನಗರದ ಹೋಟಲೊಂದರಲ್ಲಿ ಕಾಫಿ ರುಚಿಯನ್ನು ಮೊಟ್ಟಮೊದಲು ಪ್ರೊಪ್ರೈಟರೇ ಪರೀಕ್ಷಿಸುತ್ತಾರಂತೆ........ಕಾಫಿ ರುಚಿ ಕಂಡು ಬಂದರೆ, ನೀರು ಬೆರಸುತ್ತಾರೆ.

* * *

“ ಬರ್ಮಾದೇಶದ ರಾಜಕೀಯ ಸಮಸ್ಯೆಗಳನ್ನು ನಾವು, ಭಾರತದಲ್ಲಿ ಮಾಡಿದಂತೆಯೇ, ಪರಿಹರಿಸಲು ಪ್ರಯತ್ನಿಸುತ್ತೇವೆ ” (ಅಟ್ಲಿ). ಅದೇ ಔಂಗ್ ಸಾನ್‌ರವರ ಹೆದರಿಕೆ.

* * *

ತಾನು ಹೆಂಡತಿ ಮಕ್ಕಳೊಂದಿಗೆ ಸುಖವಾಗಿರುವ ಹಾಗೆ ಮೇಷ್ಟರೊಬ್ಬರಿಗೆ ಕನಸಾಯಿತಂತೆ ! . . . ಸದರಿ ಮೇಷ್ಟರಿಗೆ ಈಗ ಗುಣಮುಖವಾಗಿದೆಯಂತೆ.

* * *

" ಸುಂದರಿ ತರುಣಿ ಒಬ್ಬಳು ಬೇಕಾಗಿದೆ, ಬೊಂಬಾಯಲ್ಲಿ ತಿಂಗಳಿಗೆ 300 ರೂ. ಸಂಪಾದಿಸುತ್ತಿರುವ ಸುಂದರ ಯುವಕನನ್ನು ಮದುವೆಯಾಗಲು ; ಕ್ಷತ್ರಿಯ ಜಾತಿ ಕನ್ಯೆಯಾದರೆ, ಉತ್ತಮ " (ಜಾಹಿರಾತು) ....ದೊಂಬಿ ಪರಿಸ್ಥಿತಿಯಲ್ಲಿ ಅರ್ಧಾಂಗಿ ಕ್ಷತ್ರಿಯಳಾಗಿದ್ದರೆ, ಉಭಯತ್ರ ರಕ್ಷೆ.

* * * *

" ಇಂಡಿಯಾದೇಶದ ಒಂದು ವೈಚಿತ್ರ್ಯವೇನೆಂದರೆ, ಅಲ್ಲಿಯ ಹುಡುಗರು ತಾವು ಮದುವೆಯಾದ ಹುಡುಗಿಯರನ್ನು ತಿಳಿದುಕೊಳ್ಳುವುದು, ಮದುವೆ ಆದ ಮೇಲೆಯೇ ! " (ಭಾಷಣ)....ಪ್ರಪಂಚದ ಎಲ್ಲೆಡೆಯಲ್ಲೂ ಹೀಗೆಯೇ.

* * * *

" ದಕ್ಷಿಣ ಆಫ್ರಿಕಾಗೆ ಹೋಗಬೇಕೆಂದಿದ್ದ ಹಲವು ಭಾರತೀಯ ಗಾಯಕರು ತಮ್ಮ ಪ್ರವಾಸವನ್ನು ನಿಲ್ಲಿಸಿರುವರು " (ಸುದ್ದಿ)....ಎರಡು ದೇಶಗಳ ನಡುವೆ ಬೆಳೆದಿದ್ದ ದ್ವೇಷ ಇದರಿಂದ ಕೊಂಚ ಕಡಮೆ ಆಗಬಹುದೋ, ಏನೋ ?

* * * *

" ದೋಸೆಮಾಡುವ ಸಲುವಾಗಿ ಹೋಟಲುಗಳಿಗೆ ಹೆಚ್ಚು ಪ್ರಮಾಣದ ಅಕ್ಕಿಯನ್ನೊದಗಿಸಲಾಗುತ್ತಿದೆ " (ಪತ್ರಿಕೆ)....ಹಾಗಾದರೆ, ಸಾರ್ವಜನಿಕರಿಗೆ ಇನ್ನು, ಕೊಂಚ ಸಿಮೆಂಟ್ ಹೆಚ್ಚಾಗಿ ಸಿಗಬಹುದೆಂದು ತೋರುತ್ತದೆ.

* * * *

" ರೇಷ್ಮೆಸೀರೆಯ ಮೇಲಿನ ಆಸೆಯಿಂದ ಹೆಂಗಸರು ಲಕ್ಷಾಂತರ ಹುಳಗಳನ್ನು ....." (ಪತ್ರಿಕೆ)....ಪಾಪ ! ಬಡ ಗಂಡಸರನ್ನು ಹೀಗೆ....ಹುಳಗಳು ....ಅಂತ... ! ಅನ್ನಬಹುದೆ ?

* * * *

" ಟಾಗೂರರನ್ನೇ ತಮ್ಮ ಮೇಲುಪಂಕ್ತಿಯಾಗಿಟ್ಟುಕೊಂಡರೆ, ಕನ್ನಡ ಬರಹಗಾರರು ಬದುಕಿಕೊಂಡಾರು ! " (ಭಾಷಣ)....ಹೌದು !....ಕಳೆದ ಅನೇಕ ವರ್ಷಗಳಿಂದ, ಟಾಗೂರರು ಏನನ್ನೂ ಬರೆದಿಲ್ಲ ; ಪ್ರಕಟಿಸಿಲ್ಲ.

* * * *

ಕೈಕೊಟ್ಟ ಜೋಲುಕೋಟು

—o—

“ ನಮಸ್ಕಾರ ”, ಆಪ್ರಾಣಿ ಅವನ ಮುಂದೆ ಹಾಯ್ದಾಗ ಅರಚಿದ.

“ ಹ್ನ್ನ, ನಮಸ್ಕಾರ ”, ಹೂಂಕರಿಸಿದೆ.

“ ಹ್ನ್ನ—ತಾವು....ವು ...ಊ , ಆದಿನ ”, ಎಂದು ಉಗುಳುನುಂಗಿದ, ಆ ಜೋಲುಕೋಟು.

“ ಸರಿ. ಆದಿನ ಏನು ” ಎಂದು ಠೀವಿಸಿದೆ.

“ ಏನು ಇಲ್ಲ ” ಎಂದು ಸಾಮಾನಿಕ್ಕಳಿಸಿದ್ದ ಕೈಯಿಂದ, ಜಪಾನ್ ಕನ್ನಡಕದ ಕೆಳಗೆ ಕಕ್ಕರಿಸಿದ ಕೊಕ್ಕರೆ ಮೂಗನ್ನು, ನೀವುತ್ತ ಮುಂದುವರಿಸಿದ —“ ಆ ರಾಮಯ್ಯ ” ಅವರು—ಆ ಪಂಚಾಯ್ತಿ ಪ್ರೆಸಿಡೆಂಟು—ಅಲ್ಲ—ಛೇರ್ ಮನ್ನು—ಅದೇ ತಾವು ಫ್ರೆಂಚ್ ರಾಕ್ಸ್ ಅಲ್ಲವೆ ? “ಎಂದು ನಶ್ಯ ಏರಿಸಿದ.”

“ ಸರಿ. ಹೌದು ಏನಾಗ್ಬೇಕು ? ಹೇಳಿ ಬೇಗ ” ಎಂದು ರೇಗಿ ‘ ಸೈರನ್ನಿ ’ದೆ.

“ ಹ್ನ್ನ. .ಹ್ನ್ನ ..ಏನಿಲ್ಲಾ....ಈಗಾ ಊರಿಗೆ ತಾನೆ ಹೋಗುವುದು ” ಎಂದ.

ನನಗೆ ಅರ್ಥವಾಯಿತು ಕೊಂಕಳಕಡೆ ನೋಡಿದಾಗ. “ ಇಲ್ಲವಲ್ಲ ” ಎಂದು ದೈನ್ಯದಿಂದ ಕಾಲುಜಾರಿಸಿದೆ, ನಮಸ್ಕರಿಸಿ

ಇದು ಬೇರೆ ಅಂಟಿಕೊಂತಲ್ಲಪ್ಪ ಅನುಶೂಲ. ಹ್ನ್ನ. ತಪ್ಪಿಸಿಕೊಳ್ಳ ಬೇಕು ಎನುತ್ತ ಗಾರ್ಡ್‌ಗಾಡಿಯ ಕಡೆ ತಲೆತಪ್ಪಿಸಿಕೊಂಡು ನಡೆಯುವಾಗ ಪೋರ್ಟರ್ ಎಡವಿದ, ಕಂಬ ಗುದ್ದಿತು, ಕೂಲಿ ತಳ್ಳಿದ. ಕಿಟಕಿಯ ಹತ್ತಿರ ಬಂದೆ. ಕೂರೋಣ ಅನ್ನೋದರಲ್ಲಿ ಕಾಣಿಸಿಕೊಂಡ ದ್ರಾಬೆ, “ ನಮಸ್ಕಾರ ” ಎನ್ನುತ್ತ, “ ಹ್ನ್ನ. ಏನು ಹೊರಟರ ” ಎಂದು ಹಲ್ಕಿರಿದ.

“ ಅಲ್ಲ ಎಷ್ಟು ಸರ್ತೀರಿ ಹೇಳೋದು ಹೋಗೋದಿಲ್ಲ ಅಂತ ” ಎಂದು ಹಲ್ಲುಕಡಿದೆ.

ಆತ ಬೆದರಿ, "ಸ್ವಾಮಿ, ಕೋಪ ಬೇಡಿ. ನೋಡಿ, ಭಾರ ಹೊತ್ತಿದ್ದೇನೆ ಮೂರು ಮೈಲಿ ಇಂದ, ಹೇರಿಕೊಂಡು ಹೊರ್ಬೇಕು, ತಾವು ತಲುಪಿಸದಿದ್ದರೆ, ಇನ್ನು ಮೂರುಮೈಲಿ, ಹೇಸರಕತ್ತೆ ಹಾಗೆ," ಎಂದು ಮೂಗು ನೀವಿದ.

"ಹಾಗಾದ್ರೆ ಬನ್ರಿ ಇಲ್ಲಿ. ನೋಡ್ರಿ, ಮೊದಲ್ನೆ ಗಾಡೀಲಿ ಅವರ ತಮ್ಮ ಕೂತಿದಾರೆ ಹೋಗ್ರಿ" ಎಂದೆ, ಬೆವರೊರಸಿ.

ಎಲಾ ಇವ ಈಕಡೆಯಾಕೆ ಹೋದ, ಆಕಡೆ ಹೋಗೋದು ಬಿಟ್ಟು. ಹ್ಞ. ಪಾಪ, 'ರಷ್' ಅಂತಲೇನೊ, ಹೋಗಲಿ ಬಡಪ್ರಾಣಿ—ಎನ್ನುತ್ತ ನುಸುಳಿದೆ ಕಿಟಕಿಯೊಳಗೆ.

ರೈಲು ಹೊರಟಿತು. ತಲೆ ಆಚೆಹಾಕಿ ನೋಡಿದೆ. ಅಲ್ಲಿ ಆ ಪ್ರಾಣಿ ನಿಂತಿದ್ದ. "ನಮಸ್ಕಾರ" ಎಂದು ಹಲ್ಕಿರಿದ.

'ಎಲಾ! ಸುಳ್ಳುಹೇಳಿ ಕಳುಹಿಸಿದರೂ ಸಂತಸವಾಗಿದ್ದಾನಲ್ಲ' ಎಂದು ಯೋಚನೆಯಲ್ಲಿ ಮುಳುಗುವ ಹೊತ್ತಿಗೆ ಎದುರು ಬೆಂಚಿನಿಂದ ಉಸುರಿದರು ಯಾರೋ, "ಸ್ವಾಮಿ, ತಮಗೆ ಅವರು ಈ ಮೂಟೆಕೊಡು" ಎಂದು, ಮೂಟೆಯನ್ನು ನನ್ನ ಕಡೆ ಒರಗಿಸಿದ. ತಲೆ ತಿರುಗಲಾರಂಭಿಸಿತು.

—ಬಾ. ಪು. ರಘು.

—o—

ಮೈಸೂರಿನ ದೇವಾಲಯಗಳಿಗೆ ಹರಿಜನ ಪ್ರವೇಶವಾಗದಿದ್ದರೆ, ದಕ್ಷಿಣ ಭಾರತ ಸನಾತನಿಗಳೆಲ್ಲ, ಸಂಸ್ಥಾನವನ್ನು, "ಪುಣ್ಯಭೂಮಿ" ಎಂದು ಕೊಂಡಾಡುವ ಸಂಭವವಿದೆಯಂತೆ

*   *   *

ಪ್ರಸಿದ್ಧ ತಮಿಳು ಚಿತ್ರವೊಂದಕ್ಕೆ ಹಿಂದಿ ಹಾಡುಗಳನ್ನು ಮೇಳೈಸುವ ಕೆಲಸ ಈಗಾಗಲೇ ಅರ್ಧದಷ್ಟು ಮುಗಿದಿದೆ. (ಪತ್ರಿಕೆ) ...ತಮಿಳು ಚಿತ್ರ ತಯಾರಾದಾಗಲೇ, ಈ ಕೆಲಸದ ಅರ್ಧ ಆಗಿತ್ತಲ್ಲಾ ?

*   *   *

ರೊಟ್ಟಿನ ತಾರೆಗೆ

೧

ಹಗಲೆಲ್ಲ ಕನ್ನೆಯರ ಮೆರುಗು ಮಾಟವನೋಡಿ
ಇರುಳು ಬರೆ, ಕೊರಗುವೆನು ರೊಟ್ಟಿನೀ ನವಮಣಿಗೆ !
ನನ್ನ ಮಾಸಿಕೆ ಮೇಲೆ ಬೆಳಗುವಳ ಸೊದೆಯುಂಡು
ಕೊರಳ ಕೊರಗನು ಕೊಂಚ ಸಡಿಲಮಾಡುವೆನು.

೨

ದಿನದ ಸುಸ್ತನು ಮರೆವೆ ; ತಿಂದ ಛೇಸ್ತನು ಮರೆವೆ ,
ಜಾತಿ, ಕುಲ, ನೀತಿಗಳನೆಲ್ಲ ನಾ ಮರೆವೆ.
ನಿನ್ನ ಥಳುಕಿನ ಬಣ್ಣ, ಕಣ್ಣ ಕಾಡಿಗೆಯೋಟ
ರೊಟ್ಟಿನಿಂ ಬಂದೆನ್ನ ಮೆಟ್ಟುತಿವೆ, ಅಕಟಾ !

—ರಾಮುಸ್ವಾಮಿ.

—o—

"ನೀವು ಈ ಇಲಾಖೆಯಲ್ಲಿ ಚಾಕರಿ ಪ್ರಾರಂಭಿಸಿ ಎಷ್ಟುವರ್ಷವಾಯಿತ್ರಿ ?"

"24, ಸ್ವಾಮಿ"

"ಪಾಪ! ಇಷ್ಟುವರ್ಷಗಳ ಕಾಲ ತುಂಬಾಶ್ರದ್ಧೆಯಿಂದ ಕೆಲಸಮಾಡಿದೀರಿ ....ನಿಮ್ಮನ್ನ ಪರ್ಮನೆಂಟ್ ಮಾಡಬೇಕೆಂದು ನಾನು ಇವತ್ತೇ ಬರೆಯುತ್ತೇನೆ, ಮೇಲಕ್ಕೆ !"

* * *

ಇವತ್ತಿನ ಗಾದೆಗಳು

(ಸಿನಿಮ ಪ್ರಪಂಚ)

ನುಗ್ಗಿದ ತಪ್ಪಿಗೆ, ಬಗ್ಗಿ ತೂಕಡಿಸು

ಚೋಟುದ್ದ ಚಿತ್ರಕ್ಕೆ, ಗೇಣುದ್ದ ಹಾಡು

ಗಂಡಾಗುಂಡಿ ಮಾಡಿ, ಪುಂಡು ಚಿತ್ರ ತೆಗೆದರು

ಮನೇಲಿ ಬದನೆಕಾಯಿ ಆಸೆಗೆ, ಪುರಾಣದ ಬದನೇಕಾಯನ್ನೂ ಚಿತ್ರ ತೆಗೆದಾಯ್ತು !

ರಾವಣನ ಹೊಟ್ಟೆಗೆ, ಬೂರುಗದ ಮೂಟೆ

ಕಾಸಿಗೂ ಕೇಡು, ಕಣ್ಣಿಗೂ ಬೇನೆ

ನೋಟೀಸ್ ನೋಡಿಕೊಂಡು ಒಳಗೆ ನುಗ್ಗಿದ , ಪೋಲ್ಟೀಸ್ ಕಟ್ಟಿಕೊಂಡು ಹೊರಗೆ ಬಂದ

ಕಂಡೋರ ಮಕ್ಕಳನ್ನ ಕೋತಿ ಆಡಿಸೋದು

ದಡ್ಡರಾದರೂ ಸರಿ, ದಪ್ಪಗಿರೋರೇ ಬೇಕಂತೆ

ಧನದಾಸೆಗೆ, ದನವೇ ತಾರೆ

ಆತುರಗಾರನ ಚಿತ್ರ ಮಟ್ಟ

ನಾರದನ ಪಾಡು ನಾರುವ ಹಾಗಾಯಿತು

ಕಣ್ಣುಕೊಟ್ಟ ದೇವರು, ಕೆಡಿಸ್ಕೊ, ಅಂದನೆ ?

—ಶಾರಾಂತ.



ಈ ಬ್ಯಾಟಿನಲ್ಲಿ ಹೇಗೆ ಹೊಡೆದೆಯೋ ಮೂರು ಸಿಕ್ಸರ್ – ಆರು ಬೌಂಡರೀಸ

ನಗರದ ನಾನಾ ಚೌಕಗಳಲ್ಲಿ ಭಾರಿ ಭಾರಿ ಸಿನಿಮ ಜಾಹಿರಾತುಗಳನ್ನು ನಿಲ್ಲಿಸುವುದರಿಂದ, ಸಣ್ಣ ಮಕ್ಕಳು ಅವುಗಳನ್ನು ಹಾದು ಇಸ್ಕೂಲಿಗೆ ಹೋಗಲು ಹೆದರುತ್ತಿರುವರಂತೆ.

* * *

“ ಈ ಚಿತ್ರದಲ್ಲಿ ಸುಪ್ರಸಿದ್ಧ ನಟನಟಿಯರಾದ ಶ್ರೀ——, ಶ್ರೀಮತಿ——. ಮೊದಲಾದವರು ಪಾತ್ರವಹಿಸುತ್ತಾರೆ ” (ಜಾಹಿರಾತು). ......ಮೊದಲಾದವರು ಯಾರು ಯಾರೆಂಬುದನ್ನು ತಿಳಿಸಿದರೆ, ಯಾರಾದರೂ ಚಿತ್ರ ನೋಡುವುದಕ್ಕೆ ಒಳನುಗ್ಗಬಹುದೋ ಏನೊ ?

* * *

ಯಾತ್ರಿಕರ ಪತ್ರ

ನಾನು ಗಸ್ತಿನಾಪುರ ಸೇರಿದ್ದು ಶನಿವಾರ. ಶನಿವಾರ, ರಾತ್ರಿ ನನಗೆ ರಾಜನಿಗೆ ಉಪವಾಸ. ಚಂದೀ ಸಾಯಂಕಾಲವೇ ತನ್ನ ಊಟ ಮುಗಿಸಿ, ನಾವು ಪಾರಣೆಗೇ ಅಂತ ತಂದಿಟ್ಟುಕೊಂಡಿದ್ದ ಆರು ಇಡ್ಲಿ, ಎರಡು ಡಜನ್ ಬಾಳೀಹಣ್ಣು, ಒಂದು ಪರಂಗೀಹಣ್ಣು, ಕಾಫಿ ಇವಕ್ಕೂ ಪಾಲಿಗೆ ಬಂದ. ಉಪವಾಸ ಮುಗಿಸಿ ಆ ಊರು ರಾಮಮಂದಿರಕ್ಕೆ ಹೊರಟೆವು. ಗಸ್ತಿನಾಪುರ ದಲ್ಲಿ ಬೇರೆ ಯಾವ ಕ್ಲಬ್ಬು ? ಶನಿವಾರ, ಏಕಾದಶಿಗಳಲ್ಲಿ ಅಲ್ಲಿ ಭಜನೆಯೋ, ಯಾವುದಾದರೊಂದು, ವಾಡಿಕೆ. ಈ ಶನಿವಾರ ಅಲ್ಲಿ ಸಂಜೀವದಾಸರ " ಹನುಮದ್ವಿಲಾಸ ". ಚಂದೀಗೆ ಬರೋಕೆ ಇಷ್ಟವಿಲ್ಲ. ನಾವೇ ನಡೆಸೋಣ ಅಂದ. ರಾಜನಿಗೆ ಸ್ವಲ್ಪ ದೈವಭಕ್ತಿ ಜಾಸ್ತಿ. ಮಂದಿರಕ್ಕೆ ಹೋಗುವ ಮುನ್ನ ಅಲ್ಲಿರುವ ಕೊಳಾಯಿಯಲ್ಲಿ ಕೈಕಾಲು ತೊಳೆದು, ತೂಕಡಿಸುತ್ತ ಮಂದಿರಕ್ಕೆ ಪ್ರವೇಶ ಮಾಡಿದ. ಅವನ ಚಿಕ್ಕಂದಿನಲ್ಲಿ ಹರಿಕಥೆದಾಸರುಗಳ ಶೃತಿ ಪೆಟ್ಟಿಗೆ ಕೂಡ ಬಾರಿಸಿದ್ದುಂಟು.

ಮಂದಿರಕ್ಕೆ ಇನ್ನೂ ದಾಸರು ಬಂದಿರಲಿಲ್ಲ. ಕಥೆ ಏನೋ ಪ್ರಾರಂಭ ವಾಗಿದ್ದಹಾಗಿತ್ತು. ಅಲ್ಲಲ್ಲಿ ಜನರು ಗುಂಪು ಗುಂಪಾಗಿ ಸೇರಿ ಸಭೆ ಏರ್ಪಡಿಸಿದ್ದರು. ನಮಗೆ ಯಾವ ಸಭೆಗೂ ಆಹ್ವಾನದೊರೆಯದಿದ್ದ ಕಾರಣ ಎಲ್ಲದರ ಮಾತುಕಥೆಗಳನ್ನೂ ಕೇಳುತ್ತ ಅಲೆದೆವು. ಅದೆಲ್ಲವನ್ನೂ ಪೋಣಿಸಿ ಒಂದು ಕಥೆಯಾಗಿ ಬರೆಯುವುದಕ್ಕೆ ನಮ್ಮಲ್ಲಿ ಯಾರಿಗೂ ಹೊತ್ತು ಸಾಲದುದರಿಂದ ಕೇಳಿದ್ದನ್ನು ಕೇಳಿದ ಹಾಗೆಯೇ ಬರೆದಿದ್ದೇನೆ. ......


" ...... ಇದ್ನೋಡಯ್ಯ ಗಜಕ್ಕೆ ಮೂರೂವರ್ರೂಪಾಯಿ, ಹಿಂದೆ ಇದನ್ಕೇಳ್ತಾ ಇದ್ದೋನ್ಯಾರಯ್ಯ ?— ಅಂತೂ ಕೊಟ್ನಯ್ಯಾ ಬತ್ತಿ – ಅಲ್ವೋ ನಂಗಾದ್ರೂ ಹೊಳೀಬಾರದಾಗಿತ್ತೇ ಆಪ್ಪಾನು ?— ಈಗ್ನೋಡು ಜನಗ್ಳು ದುಡ್ನೊಂದ್ರೆ ಕಪಿಮುಷ್ಟಿ ಹಿಡೀತಾರೆ–ಬರೀಕೈ ದುಡ್ಡೆಲ್ಲಿದೆ ? ಈಸಾರಿ ನವ್ಮೋರು ಆ ದೇಶದಿಂದ ಆಡಿದ್ದಾರೆ ಕಾಣೋ—ಫುಟ್-ಬಾಲೂ ಕ್ರಿಕೆಟ್ಟು ಎಲ್ಲಾ ನವ್ದೋ–ಲೋ ಕಿಟ್ಟೆ ಆ ನೀಲೀಫರದೇದು ಯಾವುದೋ – ನಂಗ್ಗೊತ್ತದು — ಏನ್ರಿ ಓವಲ್ಟಿನ್ನೆಲ್ಲಾ ಬ್ಲಾಕ್‌ಮಾರ್ಕೆಟ್ಟಂತೇ !— ಇಲ್ಲೂ ಇನ್ಮೇಲೆ ಕುಡಿಯೋದು ಮುಟ್ಟಾನಂತೆ ಕಾಣೋ, ಹಂಗಾರೆ – – ಕ್ಲಬ್ಬು ಹರಾಜೂಂತ ಕಾಣುತ್ತೆ — ನೋಡೀಮ್ಮಾ ಆ ಮಹರಾಯ್ತಿ ಉಡುತಿದ್ದ ಸೀರೆ ಹರಾಜಾಕಿದ್ರೂ ಒಂದೊಂದು ಸಾವಿರ್ರೂಪಾಯಂತ್ರಮ್ಮಾ, ಅಯ್ಯೋ ಹೊಟ್ಟೆ ಉರಿಯುತ್ತೆ ಸುಮ್ನಿರಿ —

ಸುಮ್ಮಿರಿ — ಎನಮ್ಮಾ ಇನ್ಮೇಲೆ ಐದೇ ಗಜ ಬಟ್ಟೇನಂತಲ್ಲಮ್ಮಾ ನಾವೆಲ್ಲಾ ದೊರೆಸಾನಿಗಳಾಗಬೇಕೋ ಏನೋಮ್ಮ ಅಯ್ಯೋ ನಮ್ಮನೆಯೋರು ಆ ಐದು ಗಜ ಪೂರ್ತಿಯಾಗಿ ಕೊಂಡುಕೊಂಡ್ರೆ ಹೇಗಾದ್ರೂ ನಿಭಾಯಿಸ್ತೀನಮ್ಮಾ ನಾನು— ನೋಡಯ್ಯ ಅಧಿಕಾರ ಅಂದ್ರೆ ಹೇಗೆ ಅಂತಾ – ಅವನಿಲ್ಲಿದ್ದರೆ ಪೀಕಲಾಟ ಅಂತ ಅವನ್ನ ತಲೆ ಸವರಿ ಕಿತ್ತೆಸೆದರು — ಹಣ್ಣೂ ತಿಂದು, ತೇಗಿ, ಅರಗಿಸಿಕೊಂಡು, ಸಿಪ್ಪೆ ಬಿಸಾಡಿ ಅದರಮೇಲೆ ತಾವೇ ಹುಷಾರಾಗಿ ಜಾರಿ ಬಿಡ್ತಾರಯ್ಯಾ ದೊಡ್ಡೋರು – ಲೋ ಹೋದನಯ್ಯ ನಮ್ಮ 'ಕೈ' – ಹೌದುಕಾಣೋ ಅವನಿದ್ದಿದ್ದರೆ ಭೂಪ ಬರೆಯೋನೋ– – ಅಂತೂ ಇದೆಲ್ಲಾ ಇತ್ಯರ್ಥವಾಗಿ ನಿಜ ಯಾವಾಗ್ಲೋ ತಿಳಿಯೋದು ?—ಅಯ್ಯೋ ಮರುಳೀ—ಗುಂಡಿಗೆ ಅಂದ್ರೆ ಗಾಂಧೀ ದಯಾ – ಗಾಂಧೀಗೆ ಗುಂಡಿಗೆ ತಲೆ ಎರಡು ಬಿಟ್ರೆ ಇನ್ನೇನಿಧೇರೀ ?—ಒಂದೂ ಇಲ್ಲ. ಈ ಹಾಳು ಹಬ್ಬಗಳು ಯಾಕೆ ಬರುತ್ವೋ, ಬೆಲ್ಲಸಿಗುಲ್ಲಾ, ಬಟ್ಟೆಸಿಗುಲ್ಲಾ ಸಕ್ರೆಸಿಗುಲ್ಲಾ ನಮ್ಮ ಯಜಮಾನರಿಗೆ ದುಡ್ಡೇಸಿಗುಲ್ಲಾ – ನಂಗೇನೋ ಎಳ್ಳೂ ಬೇಡ ಬೀರೋದೂ ಬೇಡ ಅನ್ಸಿವೆ – ಏನ್ರೀ ಬೆಲ್ಲಾ ಮೂರ್‍ರೂಪಾಯಂದೆ ಏನನ್ಯಾಯ ಏನನ್ಯಾಯನಮ್ಮ – ಆಗ್ಲಿ ಆಗ್ಲಿ ಸ್ವರಾಜ್ಯ ಸ್ವರಾಜ್ಯ ಅಂತಾರಲ್ಲ ಹೇಗಿರುತ್ತೊ ಇದೇ ಕಣ್ಣಿಂದ ನೋಡ್ತೀನಿ — ಆದ್ರೂ ನಂಗೇನೋ ಭಯವಾಗುತ್ತಮ್ಮ – ಅದೆಲ್ಲೋ ಕಲ್ಕತ್ತಾದಲ್ಲಿ ಮಾರಾಮಾರೀನಂತೆ – ನನ್ನ ಮನೆಬಿಟ್ಟು ಹೋಗ್ಬೇಡಾಂತ ಅಂದ್ಬಿಟ್ಟು — ತ್ಯಾಗಯ್ಯ ಹೊರಟೇಹೋಯ್ತು – ನಮ್ಮನೆ ಹುಡುಗರು ಅವರಾಫೀಸಿಗ್ಹೋದಮೇಲೆ ಆಡೋದು ನೋಡಿದ್ರೆ ಕಲ್ಕತ್ತಾ ಏನು ಬಂತು ?— ಸದ್ಯ ಮಂಕಾಡ್ ಇಂಗ್ಲೆಂಡಿಗೆ ಹೋಗೋಲ್ಲವಂತೇ – ಇನ್ನು ಆಸ್ಟ್ರೇಲಿಯಾಕ್ಕೆ ಪರವಾಗಿಲ್ಲ, ಈ ಸಾರಿ ಹ್ಯಾಮಂಡಿಗೇನು ಬಂತೋ ಧಾಡಿ ? – ಶಿಂಗ್ರು ನಿನ್ನೆ ಹೇಳ್ಲಿಲ್ಲ ?—522 – ಅದೇ ಆ ಮೆರೂನ್ ನೋಡು ಅದೇ— ಒಬ್ಬೊಬ್ರು ಆಗಾಗ ಹೀಗೆ ಮಾಡದೇಹೋದ್ರೆ ದುಡ್ಡು ಹೇಗ್ರೀ ಚಲಾವಣೆ ಆಗೋದು ?— ನಿಂದೆಷ್ಟೋಯ್ತು — ನಂದೇ — ಅಲ್ಲೋಡ್ರೀ ಕಥೆ ಎಷ್ಟು ಮುಗಿತೂಂತ ಪಕ್ಕದೋರನ್ನ ಕೇಳ್ರಿರೀ – – – –

—ಕೇಫ.

ಆ ಅಡಿಗೆಯವನು ಬಲು ಭಲೋ ಇದ್ದಾನ್ರೀ—ಶಾವಿಗೇಲಿ ಕೂದಲೆಳೆ ತೆಗೀತಾನ್ರೀ – ಛೆ ! ಛೆ ! ಶಾವಿಗೆ ಎಳೇನ ಕೂದಲಿನಲ್ಲಿ—ಅಲ್ಲಲ್ಲಾ – ಶಾವಿಗೇನ – ಕೂದಲೆಳೆ ಹಾಗೆ ತೆಗೀತಾನ್ರೀ !

* * * *



ಯಾಕ್ರೀ ನಾಗವೇಣಮ್ಮ ಹೇಗೋ ಇದ್ದೀರಲ್ಲಾ—

—ಏನು ಹಾಳು ಯುದ್ಧವೋರೀ ವಿಶಾಲಾಕ್ಷಮ್ಮನೋರೇ—

ಒಂದು ಚೌರೀಕಟ್ಟು ಸಿಗ್ತಿಲ್ಲವಲ್ರೀ ಯಾವ ಅಂಗಡೀಲೂನೂ

" ಪ್ರತಿಫಲದಮೇಲೆ ಕೊಂಚವೂ ಆಸೆಪಡದೆ, ಈ ಚಿತ್ರವನ್ನು ತೆಗೆಯಲಾಗಿದೆ " (ಹೇಳಿಕೆ) ಇಂತಹ ಉದಾತ್ತ ಕಲೋಪಾಸಕರನ್ನು ನಾವು ನಿರಾಶೆಗೊಳಿಸಬಾರದು.

* * *

" ಸ್ತ್ರೀಯರ ಮೆರವಣಿಗೆಯನ್ನು ತಡೆಯಲು ಪೋಲೀಸರು Tear Gas (ಕಣ್ಣೀರುಗಾಳಿ)ಯನ್ನು ಪ್ರಯೋಗಿಸಿದರು " (ವಾರ್ತೆ)........" ವಜ್ರಂ ವಜ್ರೇಣ ಭಿದ್ಯತೆ " ಸರಿಯಾದ ಉಪಾಯ.

* * *

ಕಾಡು—ನಾಡು

ಆರು ತಿಂಗಳ ಹೋಟಲೂಟ ಉಂಡು ಬದುಕಿ, ಬಾಡಿಗೆಗೆ ಮನೆ ಸಿಕ್ಕಿ, ಸತಿಸಮೇತ ಸಂಸಾರ ಹೂಡಿ, ಬಾಳಿಗೆ ಸವಿಗೂಡಿಸಿ ಒಂದು ಸಪ್ತಾಹವಾದ ಕೂಡಲೇ... ...

ಅತ್ತೆ ಬಂದು, ಹೆಂಡತಿಯನ್ನು ಊರಿಗೆ ಕರೆದುಕೊಂಡು ಹೊರಟರೆ. ಆ ನಿರ್ಭಾಗ್ಯ ಗಂಡ, ಹಾಲಪ್ಪನ ಅಧಃಪಾತಾಳವನ್ನು ನೀವೇ ಊಹಿಸಬಲ್ಲಿರಿ. ನಾವೇ ವಿವರಿನಬೇಕಾಗಿಲ್ಲ. ಆ ಅತ್ತೆಯೋ, ಅಮೀಲ್ದಾರರ ಹೆಂಡತಿ, ಹೆಸರು, ಕಾಡಮ್ಮ. .. ..

ಆಕೆಯ ಕೂಗಾಟ, ಹೊರಡಲು ಅಣಿಮಾಡಿಕೊಳ್ಳುವ ರಾದ್ಧಾಂತ, ಹಾಲಪ್ಪನ ಕಿವಿಗಳೆರಡನ್ನೂ, ಪಕ್ಕದ ರೂಮಿಂದಲೇ ಬಡಿಯುತ್ತಿತ್ತು. ಎಂತಹ ಕರಾಳ ಕಂಠ!

ಹಾಲಪ್ಪ—ಸಾಧುಪ್ರಾಣಿ. ಮುಂದೆ ನಿಂತರೆ, ಹಾಯ ಬರದು. ಹಿಂದೆ ನಿಂತರೆ, ಒದೆಯ ಬರದು. ಪಾರ್ವತೀ-ಹಾಲಪ್ಪರ ಮದುವೆಯಾದ ಮರು ದಿನವೇ ಆತ ಕಾಡಮ್ಮನ ಕಾಟಕ್ಕೆ ಕಟ್ಟುಬಿದ್ದ. ಪಾರ್ಕಿಗೆ ಹೋಗಲು, ಅತ್ತೆಯ ಅಪ್ಪಣೆ ಆಗಬೇಕು! ಕದ್ದೂ ಕೂಡ ಕಾಮಿನಿಯ ಕಟಾಕ್ಷವನ್ನು ಸಂಪಾದಿಸುವ ಹಾಗಿಲ್ಲ. ಸಂಸಾರ ಚಕ್ರ ಕದಲಿದ ಕೂಡಲೇ ಕಾಡಮ್ಮನೂ ಬೆಂಗಳೂರಿಗೆ ವಕ್ರಿಸಿದಳು.

ಕಾಡಮ್ಮ ಅಳಿಯನನ್ನು 'ಹಾಲು' ಎಂದೇ ಸಂಬೋಧಿಸುವಳು. ಅವನು ಇನ್ನೂ ಪುಟ್ಟ ತುಸುಕೂಸು ಎಂಬುದೇ ಅವಳ ತೀರ್ಪು.

ಕಾಡಮ್ಮ ಒಳಕ್ಕೆ ಹಾರಿ ಬಂದಳು. "ಹಸಿಕಡಲೆ ಚೀಲ ಎಲ್ಲಿದೆ ಅಂತ ಆಷ್ಟು ಹೊತ್ತಿನಿಂದ ಅರಚುತ್ತಿದೇನೆ! ಕಿವಿ ಕೇಳಿಸೋದಿಲ್ಲವೆ? . ಯಾಕೆ? ಏನುಯೋಚನೆ? ಹಾಲು!" ಎಂದಳು. ಹೂಜಿಯ ಗುಲಾಬಿಯ ಎಸಳುಗಳನ್ನು ಒಂದೊಂದಾಗಿ ಕಿತ್ತುತಿನ್ನುತ್ತ, ಹಾಲಪ್ಪ "ಏನಂದ್ರಿ? ಯೋಚನೆಯೆ? ಏನಿಲ್ಲ! .ಬರೀಯೋಚನೆ, ಅಷ್ಟೆ", ಎಂದು ಕನವರಿಸಿದನು. ಅದಕ್ಕೆ ಆಕೆ, "ಥೂ! ಗುಲಾಬಿ ತಿನ್ನುವುದು ದುರಭ್ಯಾಸ....ಹುಳ ಹುಪ್ಪಟೆ ಇರುತ್ತದೆ. . ಯಾಕೆ ಹೀಗೆ ಬೆಪ್ಪು ಬೆಪ್ಪಾಗಿ ಆಡುತ್ತೀಯ? ಪಾರ್ವತಿ ಇಲ್ಲದೆ, ಇಷ್ಟು ಎತ್ತರಕ್ಕೆ ಬದುಕಿಲ್ಲವೆ ನೀನು? ಹತ್ತುದಿವಸ ಇವಳು ನನ್ನಲ್ಲಿದ್ದ ಮಾತ್ರಕ್ಕೆ ಹಂಚಿಕಡ್ಡಿಯ ಹಾಗೆ ಏಕಾಗಬೇಕು ನೀನು?....ನೀನು ಅವಳನ್ನು ಮದುವೆ

ಮಾಡಿಕೊಂಡಾಕ್ಷಣ, ನಾವೆಲ್ಲ ಕಡ್ಡಿ ಮುರಿದು ಹಾಕಿ ಬಿಡಬೇಕೇನು ?....ಹೆತ್ತ ಮನ....ನಾನು ಇನ್ನು ಹೆಚ್ಚು ವರ್ಷ ಬದುಕಿರೋದಿಲ್ಲ, ನೆನಪಿರಲಿ '' ಎಂದಳು.

'' ಅದನ್ನೇ ಇನ್ನೊಂದು ಸಲ ಹೇಳಿ....ಕೇಳೋಣ '' ಎಂದು ಹಾಲಪ್ಪ ಕಿರುನಗೆ ಬೀರಿದ. ಕಾಡಮ್ಮನಿಗೆ ಅರ್ಥವಾಗಲಿಲ್ಲ. ಅವಳು ಥಟಕ್ಕನೆ ಎದ್ದು, ಹಾಲು ಕಟ್ಟಿಟ್ಟಿದ್ದ ಹಾಸಿಗೆಗೆ ಬಿಗಿ ಸಾಕೆ ಎಂದು ಪರೀಕ್ಷಿಸಲು ಹೊರಟಳು.

ಆಗ, ಅದೇ ಕೋಣೆಗೆ, ಪಾರ್ವತಿ ಬಂದಳು. ಬಂದಳು, ಅಂದ್ರೆ, ಸಾಲದು ! ನಲಿದಾಡಿಯಾಡಿ ಬಂದಳು, ನರುಗಂಪ ಬೀರಿ ಬಂದಳು, ಹೆದರಿದ ಜಿಂಕೆಯಂತೆ ನುಸುಳಿದಳು, ಇತ್ಯಾದಿ. ಹಾಲಪ್ಪ ಚಪ್ಪರಿಸಿದ. ಹಾಲಪ್ಪನ ಎದೆಯಮೇಲೆ ತಲೆ ಇರಿಸಿ ನಿಂತಳು. ಆ ಲಾವೆಂಡರ್ ವಾಸನೆ ಹಾಲಪ್ಪನಿಗೆ ನಂದನವನದ ನೆನಪುಕೊಟ್ಟಿತು. ಪಾರು! ಪಾರು, ಎಂದು ಜಪಿಸುತ್ತ ಹಾಲಪ್ಪ ತನ್ನ ಒಲುಮೆಯ ಕುಲುಮೆಯ ಗುರುತೊಂದನ್ನು ಅವಳ ಹಣೆಯಮೇಲಿಟ್ಟ. '' ತುಂ ತುಂಬ ಕಾಗದ ಬರೀಬೇಕು, ನಿಮ್ಮ 'ಸಕ್ರೆ'ಗೆ! ತುಂ ತುಂಬ, '' ಎಂದು ಪಾರ್ವತಿ ತೊದಲಿದಳು. ಹಾಲಪ್ಪನ ಕಣ್ಣಲ್ಲಿ ನೀರು ತುಂಬಿತು. 'ಹಾಲೂ,' ಎಂಬ ಕಾಡಮ್ಮನ 'ಅರಣ್ಯರೋದನ', ಕಂಬನಿಯನ್ನು ಅರ್ಧದಲ್ಲೇ ತಡೆದು ನಿಲ್ಲಿಸಿತು. '' ನನ್ನ ಕನ್ನಡಕ್ಕ ಎಲ್ಲಿಟ್ಟೆ '' ಎಂಬ ಗರ್ಜನೆ ಎದ್ದಿತು.

ಗಂಡ ಹೆಂಡಿರಿಬ್ಬರೂ ಕನ್ನಡಕವನ್ನು ಹುಡುಕಲು ಹೊರಟರು- ಆ ನೆಪದಲ್ಲೇ ಅವರಿಬ್ಬರೂ ಕಾಡಮ್ಮನಿಂದ ತಪ್ಪಿಸಿಕೊಂಡರು. ಕಡೆಗೆ ಕಾಡಮ್ಮ, 'ಪಾರ್ವತಿ! ನಿನ್ನ ಗಂಡ ಕನ್ನಡಕವನ್ನ ಆಗಲೇ ಈ ಪೆಟ್ಟಿಗೆಯೊಳಗಿರಿಸಿದಾನಲ್ಲಾ....ಬರಹೇಳು, ಇಲ್ಲಿ! '' ಎಂದು ಅರಚಿದಾಗ, ಹಾಲಪ್ಪನೂ ಅಲ್ಲಿಗೆ ಬಂದ.

ಪಾರ್ವತಿಯ ಸೀರೆ ಕುಪ್ಪಸಗಳನ್ನು ಅತ್ಯಾನಂದದಿಂದ ಅತಿ ನಿಧಾನವಾಗಿ ಹಾಲಪ್ಪ ಮಡಿಸಿಟ್ಟ. ಒಂದೊಂದರಲ್ಲೂ, ಒಂದೆರಡು ಕಂಬನಿಯನ್ನೂ ಸೇರಿಸಿದ. ಎಲ್ಲವನ್ನೂ ಅಚ್ಚುಕಟ್ಟಾಗಿ ಜೋಡಿಸಿದಮೇಲೆ, ಪಾರ್ವತಿ ಒಂದು ಫೋಟೊವನ್ನು ಗುಟ್ಟಾಗಿ ತಂದಿರಿಸಿದಳು. ಅದು ಕಾಡಮ್ಮನ ಕಣ್ಣಿಗೆ ಬೀಳದಿರಲಿಲ್ಲ ರಾಡಾರ್‌ದೃಷ್ಟಿ ಆಕೆಯದು !

'' ಏನೇ ಅದು ? ''

" ದೇವರ ಪಟ "

'' ಯಾವ ದೇವರು ? ''

'' ನನ್ನ ಕೈಹಿಡಿದ ದೇವರು ''

'' ಹಾ ! ನಿನ್ನ ಕೈಹಿಡಿದ ಮಾತ್ರಕ್ಕೆ, ನೀ ಜೋತು ಬೀಳಬೇಕೇನು ? ಹೀಗೆ, ಚೆಲ್ಲಾಟ ಆಡಿದರೆ, ನೀನು ನಿನ್ನ ಗಂಡನ ಅರಗಿಣಿಯಾಗಿ, ಅವನು

ಹಾಕಿದ ಪಂಜರದಲ್ಲಿ ಪರದಾಡಬೇಕಾಗುತ್ತೆ, ಪಾರ್ವತಿ. ದೇವರಂತೆ, ದೇವರು! ನಾನೆಂದೂ ನಿಮ್ಮ ಅಪ್ಪನನ್ನ ಹೀಗೆ ಹೊಗಳಿದ್ದಿಲ್ಲ. ಗಂಡಸರನ್ನ ಗಾಣಕ್ಕೆ ಕಟ್ಟಿ ಹದಕ್ಕೆ ತರಬೇಕು, ಕಣೆ........ಹಾಲೂ ! ಕೊಂಚ ಟೀ ಮಾಡಬಾರದೆ ? ಸುಮ್ಮನೆ ಕೆನ್ನೆ ಕೆಂಚುಮಾಡಿಕೊಂಡು ನಿಂತಿರೋದು ಯಾಕೆ ? ಹೊರಡುವಾಗ ಒಂದೊಂದು ಗುಟುಕು ಬಿಸಿನೀರು ಕೊಡು ''

ಹಾಲಪ್ಪ ಅಡಿಗೆ ಮನೆಗೆ ನುಗ್ಗಿ ಒಲೆ ಹಚ್ಚಿದ. ಬಟ್ಟಲುಗಳಲ್ಲಿ ಟೀ ತುಂಬಿಸಿದಾಗ, ಯಾವುದೋ ಒಂದು ಪುಡಿಯನ್ನು ನೆನೆದು, ಅದು ಇದ್ದಿದ್ದರೆ, ಈಗ ಈ ಬಟ್ಟಲಲ್ಲಿ ಬೆರೆಸಿದ್ದರೆ, ಆಕೆ ಹರಹರ ಅಂತ . .ಎಂದೆಲ್ಲ ಕನಸುಕಂಡ.

ಕಾಡಮ್ಮ ಬಾಗಿಲಲ್ಲಿ ನಿಂತಿದ್ದಳು ನಿಲ್ಲುವುದಕ್ಕೆ ತಡಮಾಡಿದ್ದರೂ, ಅವನ ಹತ್ತಿರ ಆ ಪುಡಿ ಇರಲಿಲ್ಲ. ಟೀ ಕೊಟ್ಟ , ಕುಡಿದಳು.

ಜಟಕ ಬಂತು : ಹಾಳು ಜಟಕದ ಹಿಂಭಾಗವನ್ನೆಲ್ಲ ಕಾಡಮ್ಮ ಕತ್ತಲು ಮಾಡಿದಳು. ಹಾಲಪ್ಪನಿಗೆ ಚೂರುವಾರು ಕಾಣಿಸಿತು , ಅಷ್ಟೆ.

ಮನೆಯೊಳಕ್ಕೆ ಬಂದ. ಕಾಡಮ್ಮನ ಅರ್ಧಮನೆ ನಾಡಾಗಿದೆ : ಪಾರು ಇದ್ದ ಅರ್ಧಮನೆ ....ಅವಳು ಸುಳಿದಾಡಿದ ಊರು... ...ಕಾಡಾಗಿದೆ !

—ರೇವಣ್ಣ.

——o——

ಆತ : ಈ ಪುಡಿ ತೆಗೆದುಕೊಳ್ಳಿ, ಹಾಲಿನಲ್ಲಿ. ಬೆಳಗ್ಗೆ, ಭೇಟಿಯಾಗೋಣ!

ಈತ . ಸಾಧ್ಯವೆ ? ಡಾಕ್ಟರೆ !

* * *

'' ಶಾಂತಿಸ್ಥಾಪನೆಯ ಉದ್ದೇಶದಿಂದ ಬೊಂಬಾಯಲ್ಲಿ ಯಜ್ಞನಡೆಯುತ್ತಿದೆ '' (ಪತ್ರಿಕೆ) ಕೋಮುವಾರಿಗೆ ಧಾರ್ಮಿಕ ಹೆಸರು ಕೊಡುವುದು ಅನುಚಿತ.

* * *

" ಅ. ರ. ಏ. ಸಂಘ, ಕ. ನಾ ಪರಿಷತ್ತು ಇವುಗಳ ಧ್ಯೇಯವಾದ ಕ. ಏ. ವಿಷಯವನ್ನು ರಾ. ರ ಸ. ಸದಸ್ಯರಿಗೆ ಪರಿಚಯಮಾಡಿ ಕೊಟ್ಟಿದಾರೆ '' (ಕ. ನುಡಿ)........ವಿಷಯ ಅತಿರಹಸ್ಯವೆಂದು ತೋರುತ್ತೆ.

* * * *

ಕಲಿಗನ್ನಡ ಸ್ಪರ್ಧೆ

[ಸೂಚನೆ : ಅಪೂರ್ಣಪದದಲ್ಲಿ ಖಾಲೀಭಾಗವನ್ನು ಭರ್ತಿಸಿ.]

1. ಪೋಲೀಸ್ ಅಧಿಕಾರಿಗಳು ಆವಾದಿತರೊಡನೆ ಅವರ ಮನೆಯನ್ನು ಪ್ರವೇಶಿಸಿ ಮೊಖದ್ದಮೆಗೆ ಬೇಕಾದ್ದನ್ನೆಲ್ಲಾ "—ೋಧನೆ" ಮಾಡಿ ಹೊರ ಬಂದರು.

2. ಮೊನ್ನೆ ಟೌನ್‌ಹಾಲಿನಲ್ಲಿ ನಡೆದ ಕಷ್ಟತಾಳಕಣ್ಣಯ್ಯ ಭಾಗವತರ ಸಂಗೀತದಲ್ಲಿ ಒಂದು ಅಪೂರ್ವ ವಿಶೇಷವೆಂದರೆ, ಅವರು ಸಭಿಕರಿಗೆ ಆಶ್ಚರ್ಯ ವಾಗುವಂತೆ "—ಪ್ರಸ್ವರ"ಗಳನ್ನೂ ಹಾಡಿ ತೋರಿಸಿದ್ದು.

3. ನಾಮೇಲು, ತಾಮೇಲು, ನಮ್ಮವರು - ತಮ್ಮವರು ಎಂದು ಇಬ್ಬರಿಗೂ ಕೊಂಚ "—ೃಪೋಟಿ" ನಡೆದು, ಚಿಕ್ಕ ಕಾಳಗವೇ ಆಗಿ ಕೊನೆಗೆ ಒಬ್ಬ ಬಕ್ಕೆಟ್ ಒದ್ದ.

4. ——'ನಮ್ಮಲ್ಲಿ "—ನ ಪದಸಾಹಿತ್ಯ"ದ ಬೆಳವಣಿಗೆ ಸಾಲದು' ....ಎಂಬ ಕೂಗೇ ಈಚಿನ ಹೊಸಲೇಖನಿಗಳ ಹಲವಾರು ಹಳ್ಳಿಯ ಹಾಡುಗಳ ಉದ್ಭವಕ್ಕೆ ಕಾರಣವಿರಬಹುದು.. .. ..ಬಹುಶಃ.

5. — "ಲೋಕ —ೀವಾನಿರತ" ಶ್ರೀಮಾನ್ ಹಲ್ಲೂರು ಹುಳಿಯಪ್ಪನವರು 'ಬಡವರ ಬಂಧು' ಸಂಘದಿಂದೇರ್ಪಟ್ಟ ಸತ್ಕಾರಸಮಾರಂಭದಲ್ಲಿ ಎಂದಿನಂತೆ ಹಾಜರಿದ್ದು ಊಟೋಪಚಾರಗಳನ್ನು ತೀರಿಸಿಕೊಂಡು ದಯಮಾಡಿದರು.

6. ಮಾವನ ಮನಿಯಾರ್ಡರುಗಳ ಬಲದಿಂದ, ಸಿನಿಮಾರಾಣಿ, ಕ್ರಿಕೆಟ್ ಕ್ರೀಡೆ, ಬೀರೇದೇವಿಯ ಆರಾಧನೆ ಇವುಗಳಲ್ಲಿ ಮುಳುಗಿ "ಮ—ೋನ್ಮತ್ತ" ನಾಗಿದ್ದರಿಂದಲೇ ಅವನು ಪರೀಕ್ಷೆ ಮರೆತು ಪಿಕ್ನಿಕ್ ಹೊರಟದ್ದು.

(ಉತ್ತರಗಳಿಗೆ ಕೊನೇ ಪುಟ)

—ಟೀಯಸ್ಸಾರ್‍ರಾವ್.

ಅತ್ಯಗತ್ಯ

ಸತ್ಯಮೇವ ಜಯತೆ ನಾನೃತಂ, ಎಂಬುದು ಸತ್ಯಯುಗದಲ್ಲಿ, ಸತ್ಯಲೋಕದಲ್ಲಿ. ಇದು ಸ್ಮಟ್ಸ್ ಯುಗ, ಅಣುಲೋಕ. ಕಂಡದ್ದನ್ನ ಹೇಳಿದರೆ, ಕೆಂಡ ಸುರಿಯೋ ಕಾಲ. ಮೋಜು, ಷೋಕಿ, ಪ್ರಚಾರ, ರಾಜತಂತ್ರ, ಇಮಿಟೇಷನ್ ವಜ್ರ, ರೇಯನ್, ಕೃತಕರಬ್ಬರ್, ಸೋಯಾಬೀನ್ ಹಾಲು--ಇವುಗಳ ಕಾಲ. ಒಬ್ಬನಿಂದ ರಕ್ತಹೀರಿ ಮತ್ತೊಬ್ಬನ ಅನೀಮಿಯ ಪರಿಹರಿಸುವ ಕಾಲ ಆದ್ದರಿಂದ, ಸುಳ್ಳಿಗೇ ಸನ್ಮಾನ, ಮೋಸಕ್ಕೇ ಮನ್ನಣೆ.

ಈ ಪರಿಸ್ಥಿತಿಯಲ್ಲಿ, ನಾವು ಸುಳ್ಳನ್ನು ಪರಿಪೋಷಿಸುವ ಸಂಸ್ಥೆಗಳಿಗೂ ವ್ಯಕ್ತಿಗಳಿಗೂ ಹೆಚ್ಚು ಬೆಂಬಲವೀಯಬೇಕಾದ್ದು ನಮ್ಮ ಕರ್ತವ್ಯ ಲಾಯರುಗಳಿದ್ದಾರೆ. ಕೋರ್ಟಿನಲ್ಲಿ ಅವರ ಕಪಟೋತ್ಸಾಹ, ಕೃತಕಚಾತುರ್ಯ, ಮನಮೋಹಕವಾಗಿವೆ. ತಿಳಿದೂ ತಿಳಿದೂ ಅವರು ನಿರ್ದೋಷಿಗಳನ್ನು ಕಾನೂನಿಂದ ಕಟ್ಟಿ ಕಾರಾಗೃಹಕ್ಕೆ ದಬ್ಬುತ್ತಾರೆ, ಸಂತೋಷ. ಆದರೆ, ಇದರಿಂದ ಅವರ ಆರ್ಥಿಕಸ್ಥಿತಿ ಅವರ ಆಸೆ ಇರುವಷ್ಟು ಉತ್ತಮವಾಗುತ್ತಿಲ್ಲವೆಂದು ಅವರು ಗೋಳಾಡುತ್ತಿರುವರು. ನಿಜವನ್ನು ಅಚ್ಚುಹಾಕಿದರೆ ಅನಾಹುತವಾದೀತೆಂಬ ಭಯದಿಂದ, ಪತ್ರಿಕೆಗಳು ಅನೃತವನ್ನೇ ಅಮೃತವಾಗಿ ಪರಿಗಣಿಸಿ ಪ್ರಕಟಿಸುತ್ತಿದ್ದಾರೆ, ಸರಿ. ಆದರೆ, ಅವುಗಳನ್ನು ಓದುವವರೆಷ್ಟುಮಂದಿ ? ಓದಿ, ಅವುಗಳಿಂದ ಸುಳ್ಳಿನ ಸಾಫಲ್ಯವನ್ನು ಅರಿತುಕೊಂಡು, ತಮ್ಮ ಜೀವನಪಥವನ್ನು ತಿದ್ದಿಕೊಳ್ಳುವವರೆಷ್ಟುಮಂದಿ ? ಬಹಳ ಸ್ವಲ್ಪ ಜನ, ಮಾತ್ರ. ಉಪಾಧ್ಯಾಯರುಗಳೂ ಕೂಡ, ಸುಳ್ಳೇ ಒಳ್ಳೇದೆಂದು ಬೋಧಿಸುತ್ತಿದಾರೆ, ಒಪ್ಪಿದೆ ಸುಳ್ಳು ಹೇಳಿದರೆ, ಬೆತ್ತದೇಟು ತಪ್ಪಿಸಿಕೊಳ್ಳಬಹುದೆಂದು ಸಾರಿ, ಅವರು ಮಕ್ಕಳಿಗೆ ನಿಜವನ್ನು ಮರೆಸುವ ನೀತಿಯನ್ನು ಬೋಧಿಸುತ್ತಿದಾರೆ. ಪಠ್ಯಪುಸ್ತಕಗಳಲ್ಲೂ ಕೂಡ, ಕಾಗೆ ಕನ್ನಡ ಹೇಳುತ್ತೆ. ಕಪಿ ಕವಿತೆ ಹೇಳುತ್ತೆ ಎಂಬ ಸುಳ್ಳುಗಳನ್ನು ಸೇರಿಸಿ, ಅದರ ಸ್ವಾರಸ್ಯವನ್ನು ಹುಡುಗರಿಗೆ ಹೇಳಿಕೊಡುತ್ತಿದೇವೆ ಆದರೂ, ಸಾಲದು.

ಸುಳ್ಳು ದಾರಿಯಿಂದ ಸುಲಭವಾಗಿ ಸುಖಜೀವನ ಸಂಪಾದಿಸಲು ಸಾವಿರಾರು ಅವಕಾಶಗಳನ್ನು ಕಲ್ಪಿಸಿಕೊಟ್ಟಿರುವ ಆಧುನಿಕ ಆದರ್ಶಸಂಸ್ಕೃತಿ,— ಧರ್ಮನಿರ್ಮಗಳ ಸೋಗನ್ನು ತೆಗೆದು ಹಾಕಿ, ಕೇವಲ ಸಣ್ಣವಯಸ್ಸಿನಿಂದಲೇ ದೇಶದ ಮಕ್ಕಳಿಗೆ ಸುಳ್ಳು ಕಪಟ ಮೋಸ ಇವುಗಳನ್ನು ಚಾಕಚಕ್ಯತೆಯಿಂದ ಮಾಡಲು ಹೇಳಿಕೊಡಬೇಕಾಗಿದೆ. **ಕಾನೂನಿನ ಚೌಕಟ್ಟಿನಲ್ಲೇ, ಅಧಿಕಾರದ ಅಂಕೆ**

ಯೊಳಗೇನೆ, ನೀತಿಯ ಹೆಸರಿನಲ್ಲೀ, ಗಾಂಧಿಯ ನೆರಳಿನಲ್ಲೀ, ಸತ್ಯದ ಕಣ್ಣಿಗೆ ಮಣ್ಣೆರಚಿ, ನಿತ್ಯವೂ ಸಂಪಾದನೆ ನಡಿಯಿಸಿಕೊಂಡು ಹೋಗುವ ರೀತಿಯನ್ನು ನಮ್ಮ ಮಕ್ಕಳು ಕಲಿಯಬೇಡವೆ ? ಇದನ್ನು ಕಲಿಸಲು ನಮ್ಮಲ್ಲಿ ನುರಿತ ಮೋಸಗಾರರಿಗೇನೂ ಕಡಮೆ ಇಲ್ಲ. ಇದನ್ನು ಕಲಿಯಲು ನಮ್ಮಲ್ಲಿ ಕಾತುರ ಜನಕ್ಕೇನೂ ಕಡಮೆ ಇಲ್ಲ.

ಕಂಟ್ರೋಲುಗಳ ಕಾಲ ಕಳೆದುಹೋಗುತ್ತಿವೆ. ಭಿಕ್ಷಾಧಿಕಾರಿಗಳು ಲಕ್ಷಾಧಿಕಾರಿಗಳಾಗುವ ಲಕ್ಷ್ಮೀಯುಗ ಆಗಲೇ ಮುಗಿಯುತ್ತ ಬರುತ್ತಿದೆ ಈಗಲಾದರೂ ನಾವು ಎಚ್ಚೆತ್ತುಕೊಂಡು, ಸೊನ್ನೆಯನ್ನೇ ಸ್ವರ್ಣವಾಡಬಲ್ಲ ಈ ಕಪಟಶಾಸ್ತ್ರವನ್ನು ಶಿಕ್ಷಣಕ್ರಮದಲ್ಲಿ ಸೇರಿಸಿ, ಮುಂಬರಿದ ಜನಾಂಗವೆನಿಸಿಕೊಳ್ಳಬೇಡವೆ ?

—ಗಂಗಾಧರ.

—o—

ಸಂಪಾದಕರ ತಲೆನೋವು

ಓದುಗರಿಗೂ ಹಂಚುವ ವ್ಯವಸ್ಥೆ

ರಾತೀಖು:—3 ನಜವರಿ 47

ಳಬೆಂಗೂರು.

ನಮುರಂಜಕ ಸಾಹ್ಯಸರವತ್ತಾದ ರೊಕವಂಜಿ ಸಾವುತಪ್ರಿಕೆಯ ಪಂಸಾದಕರ ಮುಸಕ್ಷಮುಕ್ಕೆ.

ದಿಯೇ ಲಕ್ಯಾಣರುಪಿಯಲ್ಲಿ ಟುಪ್ಪಿಳಿಬೆದು, ಷ್ಟೆಯೋ್ಯ, ತವಿಕೆಗಳನ್ನು, ಧೆಕಗಳನ್ನೂ, ಮತ್ತ ತಪ್ರಿಕೆಯಲ್ಲಿ ಕ್ರಪಟಿಸಲೆಂದೂ, ಗಾಹೆಕ್ರಪಟಿಸಿದ್ದನ್ನು ಡೋನಕೇಬೆಂದು, ಕಬಕ್ಷಪಿಯ ಗಾಹೆ ದಾಕೂ, ದಾಕೂ, ಕಾಸಾಗಿ, ನೊಕೆಗೆ ಮತ್ತನ್ನೆಲ್ಲ— ಳೀಕಿಡಿಬೋಣ— ಧಅವಾ, ನನ್ನೆಥಕೆಗಳು ನೆಚ್ಚಾಗಿಲ್ಲವೇ ? ಮಿನ್ನವಾಭನೆಯಲ್ಲಿ ? ಗೀಯಲಾದರೂ, ಮಿನ್ನ ದುಂಮಿನ ಚೆಂಸಿಕೆಯಲ್ಲಾದರೂ ನನ್ನ, ತಮ್ಮು, ನನ್ನ ವನಹೋಮುನಾಂಗಿಯಾದ ಮುಕಲಳದುಮ್ಮು ಷಾಭೆಯನ್ನು ಕ್ರಪಟಿಸಿ ಮನ್ನ ನಮುತಂಸೋಷಡಪಿಸುತ್ತೀರೆಂದು ಬಂನಿರುತ್ತೇನೆ.

—ಬ. ಪ್ರಾ.

ಗೀತೆಯಲ್ಲಿ ಕೈಗನ್ನಡಿ

ರೊಟ್ಟಿ 1 :—ಮಕ್ಕಳಿಗಾಗಿಯೇ ಬರೆದ ಮಕ್ಕಳ ಹೊಸ ಕೈಗೀತೆ.

ರೊಟ್ಟಿ 2 :—ಅಮೃತಾಂಜನವನ್ನೇ ಉಪಯೋಗಿಸಿ—

ಪುಟ 1. ಪ್ರಸ್ತಾಪನೆ:—

ಗೀತೆಗೆ ಪ್ರಸ್ತಾಪನೆ, ಬರೆಯುವುದು ಶುದ್ಧ ಮೂರ್ಖತನ ! ನಾನು ಬರೆಯುವಷ್ಟು ಅರ್ಹತೆಯನ್ನು ಪಡೆದಿಲ್ಲಾ. .. ...ನನ್ನ ಸ್ನೇಹಿತರ ...ರು ಬಹಳ ಶ್ರಮಪಟ್ಟರು.... ಆದ್ದರಿಂದ....ಯಾಕೆ .ಅದು ? ಆದರೂ. ......

—ಸಹಿ. ಬಿ. ಭತ್ಸರಾವು.

1 ಶುರು :—ಎಲೈರ್ಜುನನೇ. . ಏನು ನೀನು ಯಾರೆಂದು ತಿಳಿದಿದ್ದೀ? ಕೇವಲ ಒಂದು ಕೈಗೊಂಬೆ.... . .ನೀನು ಏನುಮಾಡಬಲ್ಲೆ ?

2 ಪುಟ :—ಲೈರ್ಜುನನೇ ಯಾಕೆ ಹಿಂಜರಿಯುವಿ ? ಹಿಂತಿರುಗಿ ಮುಂಜರಿ. ನೀರಿನಲ್ಲಿ ನಾನು ಇದಾಗಿದ್ದೇನೆ. ಅಕ್ಕಿಯಲ್ಲಿ ಡಬ್ಬಲ್‌ಸಾಲವೇ ನಾನು - ತಿಂಡಿಗಳಲ್ಲಿ ಹೆಸರಿಗೆ ಹೆಸರು ಬೆರಸಿದ—ಸೆಯು ನಾನು. ಹುರಿದುಂಬಿಸುವ ಮಂತ್ರಗಳಲ್ಲಿ ಲಂಚವು ನಾನು ಕೆಲಸಕೊಡಿಸುವುದರಲ್ಲಿ ಸಿಪಾರ್ಸು ನಾನಾಗಿದೇನೆ. ಯೋಗಗಳಲ್ಲಿ 'ಸಂಬಂದ' ನಾನು ಆದ್ದರಿಂದ ನನ್ನನ್ನು ನಂಬು. ಬಲದಲ್ಲಿಯಾದರೋ —ಆಗಿದೇನೆ ವೇಗದಲ್ಲಿ ವದಂತಿ. .... ಹೀಗೆಯೇ ....

ಪುಟ 8—ಲೈರ್ಜುನನೇ ನಾನು ಈಗ ನಿನಗೆ ನಿಷ್ಕಾಮಖರ್ಮವನ್ನು ಹೇಳುವೆನು ಕೇಳು. " ಒಳ್ಳೆಯ ಗಂಡ ಬ್ರೆಡ್‌ನಲ್ಲೇ ಬಟರ್‍ರ್ರ ಕಂಡ " ಎಂಬಂತೇ ದುಃಖದಲ್ಲಿ ಸುಖವನ್ನೂ ಕಾಣಬೇಕು ಮನುಷ್ಯ. ಒಬ್ಬನ ಕಷ್ಟವನ್ನೂ ಮತ್ತೊಬ್ಬನ ಸುಖವನ್ನು ಸಮವಾಗಿ ಕಾಣಬೇಕು (ಲಾಯರ್‍ರನ್ನು ಕಂಡು ಕಲಿ). ಫಲಾಪೇಕ್ಷೆ ಇಲ್ಲದೆಯೇ ಕೆಲಸಮಾಡುವುದನ್ನು ಕಲಿ ಫಸ್ಟನ್ನು ಎದುರುನೋಡುವುದು ಮರೆ. ಸುಮ್ಮನೆ ಕೆಲಸಮಾಡು, ಇದನ್ನೂ ಅಪೇಕ್ಷಾ ಅನಯೋಗ್ಯವಾದ ನಂಬಳಕ್ಕಾಗಿಯೇ ಉಸಿರು ಕಟ್ಟಿ ಗಂಟಲಸೀಳಿಕೊಳ್ಳುವ ಶಾಲಾ ಉಪಾಧ್ಯಾಯರುಗಳನ್ನು ನೋಡಿ ಕಲಿ. — ಅದನ್ನೂ ಕಲಿ. ಬರುತ್ತೆ

ಎಂಬ ಧೈರ್ಯೋತ್ಸಾಹದಿಂದ ಕಲಿಯಬೇಡ. ಮುಖ್ಯ ಯಾವ ಕೆಲಸ ಮಾಡ ಬೇಕಾದರೂ ಗುರಿಯನ್ನು ಮನಸ್ಸಿನಲ್ಲಿಡಬೇಡ. ನೀನು ಮನೆಗೆ ಹೋಗ ಬೇಕೆಂದು ದಾರಿ ಹಿಡಿಯಬೇಡ....ಅಂತೂ ದಾರಿ ಹಿಡಿ. ಆ ದಾರಿ ನಿನ್ನ ಮನೆ ಸೇರಿಸಿದರೆ ಅದೇ ನಿಷ್ಕಾಮ ಕರ್ಮಫಲ. ಹಾಗಲ್ಲಾಂತ ನೀನು ವಾದ ಮಾಡು ವುದಾದರೆ ಕೇಳು, ಹೇಳು....ನೀನು ದಿನಾ ಡಿಪೋವಿಗೆ ಅಕ್ಕಿ ತರಲಿಕ್ಕೆಂದೂ, ಬೆಲ್ಲಾ ತರಲಿಕ್ಕೆಂದೂ ಹೋದರೂ ನೀನು ಎಷ್ಟುಸಾರಿ ವಾಪಸ್ಸು ಬಂದಿಲ್ಲ X—ದವಡೆ ಹಾಕಿಕೊಂಡು ? ಎಲ್ಲಾ ಖರ್ಮದಂತೆ...ಭಗವದೇಶ್ಚೆ. ಮುಖ್ಯ ಯಾವ ಆಸೆಯಿಂದ ಏನು ಕೆಲಸಮಾಡುವುದನ್ನೂ ಕಲಿಯಬೇಡ.

ಪುಟ 15—ಎಲೈ ವಾಚಕನೆ! ಯಾರು ಈ ಗೀತೆಯನ್ನು ಒಂದುಸಾರಿ ಓದುತ್ತಾರೋ....ಅವರಿಗೆ 4 ನರಕಗಳು ತಪ್ಪುತ್ತವೆ....

$\frac{1}{2}$ ಓದುತ್ತಾರೋ ಎರಡು

ಒಂದು ಅಧ್ಯಾಯ ಓದಿದರೆ ಇದೂ—

ಆರು ಲೈನು ಓದಿದರೇ ಇದೂ—

ಗೀತೆ ನೋಡುತ್ತಾರೋ ಅವರಿಗೆ——ಇದೂ.

ನೋಡಿ ಮುಟ್ಟುತ್ತಾರೋ ಅವರಿಗೆ— ,, + ಇದೂ

ನೋಡದೇ ಮುಟ್ಟುತ್ತಾರೋ—— ,, ಇದೂ... ....

ರೊಟ್ಟು 3— " ಈ ಪ್ರಪಂಚವು ಆನಂದಮಯ "— ಯಾವಾಗಲೂ 'Hills' ಸಿಗರೇಟೇ ಕುಡಿಯಿರಿ.

ಕೊನೆ ರೊಟ್ಟು—ಈ ಪುಸ್ತಕಗಳನ್ನು ಓದಲು ಮರೆತೀರಿ ಇದೇ ಗ್ರಂಥ ಕರ್ತರಿಂದ .. ..


—ಶನಿ.

ಆತ : ನಿಮ್ಮ ಅಂಗಡೀಲಿ ಅವತ್ತು ನಮ್ಮ ಹುಡುಗನಿಗೆ ತೆಗೆದುಕೊಟ್ಟನಲ್ಲ ಒಡೆಯದೆ ಇರುವ ಸ್ಲೇಟು....

ಈತ : ಒಡೆಯಿತೇನು ?

ಆತ : ಸ್ಲೇಟು ಒಡೆಯಲಿಲ್ಲ...... ಅವನ ತಂಗಿಯರು ಇಬ್ಬರ ತಲೇನೂ ಒಡೆ ಯಿತು, ಅಷ್ಟೆ !........

* * *



ಅದ್ಕ್ಮಿಗೆ ಐದು ಗಜ ಬಟ್ಟೆ ಕೊಟ್ಟೋರೂ — ಅದನ್ನು ಸರಿಯಾಗಿ ಹೊಲಿಯಲಿಕ್ಕೆ — ಸರ್ಕಾರೀ ದರ್ಜಿಗಳನ್ನು ಯಾಕ್ರೀ ನೇಮಿಸಿಲ್ಲ ?

ಕನಡಾದೇಶಕ್ಕೆ ಭಾರತ ಪ್ರತಿನಿಧಿಯಾಗಿ ಕನಡೀ ಜನರೊಬ್ಬರನ್ನೇ ನಿಯಮಿಸಬೇಕೆಂದು ಉತ್ತರ ಕರ್ನಾಟಕದ ಪತ್ರಿಕೆಯೊಂದು ಒತ್ತಾಯಪಡಿಸುತ್ತಿದೆ.

* * *

ಈ ಸಲದ S-S-L-C. ಪರೀಕ್ಷೆಯಲ್ಲಿ ಆಸ್ಟ್ರೇಲಿಯಾ ಟೆಸ್ಟ್ ಮ್ಯಾಚುಗಳ ವಿವರಗಳಮೇಲೆ ಪ್ರಶ್ನೆಗಳನ್ನು ರಚಿಸಿ ಉಪಕಾರಮಾಡಬೇಕೆಂದು ಹಲವಾರು ವಿದ್ಯಾರ್ಥಿಗಳು ಮೇಲಧಿಕಾರಿಗಳಿಗೆ ಬರೆದುಕೊಂಡಿರುವರಂತೆ.

* * * *

ಯಾರಿಗೆ ಯಾರು ?

—o—

ರಾಗ : ಮಾಂಡ್. ಅಟ್ಟತಾಳ.

ಯಾರಿಗೆ ಯಾರುಂಟು, ಈ ಊರು ಸಂಸಾರ || ಪ ||
ಭಾರಿಯೆ ಮಕ್ಕಳಿಗೆ ಸುಖವಿಲ್ಲ, ಹರಿಯೆ || ಅ ಪ ||

ಬಾಯಾರಿತು ಎಂದು ಕಾಫಿ ನೀರಿಗೆ ಹೋದೆ
ಹೋಟಲೆ ಮುಚ್ಚಿತ್ತು, ಪೆಚ್ಚಾದೆ, ಹರಿಯೆ || ೧ ||

ಅಕ್ಕಿಕಲ್‌ಗಳಿಗಾಗಿ ಡಿಪೋದ ಬಳಿಗೆ ಹೋದೆ
ಕ್ಯೂ ನುಗ್ಗಿ ಪರಸನೇ ಕಳಕೊಂಡೆ, ಹರಿಯೆ || ೨ ||

ಪೆಡ್ಡಿನೊಳ್ ಗೂಡುಮಾಡಿ ಡಬ್ಬಲ್ ಬಾಡಿಗೆಕೊಟ್ಟೆ
ಬಟ್ಟೆಬರೆ ಪೆಟ್ಗೆ ಮಾಯವಾಯಿತು, ಹರಿಯೆ || ೩ ||

ಮಂಗನಂತೆಯೆ ನಾನು ಬೆವರಿನ ಹಣಕೊಟ್ಟು
ಪೆಂಗ್ನಾಮ ಪಡಕೊಂಡೆ ನೆತ್ತೀಲಿ, ಹರಿಯೆ || ೪ ||

—ಬಿ. ಸ್ವಾ.

—o—

ಕೈಲಾಸಂ ಹೇಳಿದ್ದ ಇದನ್ನು ನೀವು ಹೇಗೆ ಹೇಳುತ್ತೀರಿ ?

ಜೂಜಿನ್ಕುದ್ರೆ ಜಟ್ಕಾಗ್ಕಟ್ಟಿದ್ರು.
ಷರತ್ ಘೋಡಾನ ಷಾ ಪಸಂದಿಗೆ ಕಟ್ಟಿದ್ರು.

* * * *

ಸಮಾಧಿ ಶಿಲೆಮೇಲಿನ ಸತ್ಯಾನೂ
ವೃತ್ತ ಪತ್ರಿಕೇಲಿ ಪಬ್ಲಿಷಾಗೋದೂ ಒಂದೇ – ಸತ್ಯ –

* * * *

ಕಥಾರಚನ ಶಾಸ್ತ್ರಸೂಚಿ

(ತರುಣ ಸಾಹಿತಿಗಳಿಗಾಗಿ)

1. ಗಂಡ – ಹೆಂಡತಿ, ಹುಳಿ – ಕಹಿ, ಎದುರುಮನೆ ಆತ; ಪಕ್ಕದ ಮನೆ ಆಕೆ, ಪರಾರಿ—(ಸುಮಾರು 8 ಪುಟದ ಸಣ್ಣ ಕತೆ)

2. ಅನಾಥಾಲಯ – ಕಾಲೇಜು, ಗೆಳತಿ – ಗುಪ್ತಗಾಮಿನಿ – ಸಹ ಗಮನ: ಕ್ರಾಂತಿ – ಗಲ್ಲಿ – ಆಸ್ಪತ್ರೆ; ಕೀರ್ತಿ – ಕಲ್ಲೆದೆ – ಸಾಹಿತಿ; ಭಾವಿ – ಏನುಕೋಮುಳಕಾಯ, ರೋಗ; ಈಗಬಾ, ಇಲ್ಲಿಬಾ, ನೋಡು ಬಾ! (25 ಪುಟದ ಉತ್ತಮ ಕಥೆ)

3. ಬೇವು, ಬೆಲ್ಲದ ಅಭಾವ, ಚಾಕರಿ – ರಾಜಿನಾಮೆ, ಬಹಿರಂಗ ಸಭೆ – ಅಧ್ಯಕ್ಷಣೆ – ಯಕ್ಷಿಣಿ, ಐಎನ್ನೈ, ಕಾರ್ಖಾನೆ – ಬಾವುಟ; ದೀನ – ದಲಿತ – ಮಲಿನ; ಜೈಲು, ಮೋಟಾರ್ ಅನಾಹುತ, ರುದ್ರಂ – ಶಿವಂ – ಮಂಗಳಂ; ಗೋರಿ. (55 ಪುಟದ ಕಿರುಹೊತ್ತಿಗೆ)

4. ಕನ್ಯಾಮಾತೆ – ಟ್ಯೂಷನ್ ಹುಡುಗ – 'ಶಿಶುಹತ್ಯೆ, ಮದುವೆ – ಮೂರ್ಛೆ, ಮಹೋದರ – ಡೆಲಿರಿಯಂ – ಪುಟವಿಟ್ಟ ಪುತ್ಥಳಿ, ಸಿನಿಮತಾರೆ – ಕಾಮುಕ, ಕೊಲೆ– ಪುನರ್ಜನ್ಮ, ಪತಿಯೋ ಪಾಪಿಯೋ? – ಪತ್ರಿಕಾವೃತ್ತಿ: ಸಂಗೀತ – ಪುನರ್ವಿವಾಹ – ತ್ಯಾಗ - ಜೈ ಹಿಂದ್ (127 ಪುಟದ ಆಧುನಿಕ ಗ್ರಂಥ)

5. ಹುಡುಗ – ಪಿಡುಬು – ಏಕಾಕ್ಷಿ ಕುಲನಾಶನಂ – ಹೆಂಡ – ಜಗಳ– ಅಪ್ಪನೋ ಬೆಪ್ಪನೋ? – ಕೆಂಪು ಸೇನೆ, ಅಕ್ಕನ ಮಗಳ ಅಕಾಲವೈಧವ್ಯ – ಕಲೆಗಾಗಿ ಅಲ್ಲಕಲೆ - ಪ್ರೇಮಪತಾಕೆ, ವಿಚ್ಛೇದನ – ಬೊಂಬಾಯಿ – ಕಟುಕ ಜೀವನ, ಕ್ಷಯರೋಗ – ಸಮುದ್ರದ ನೀನು ಬರಿಯ ಉಪ್ಪು! (223 ಪುಟದ ಸರಸಕಾದಂಬರಿ)

6. ದೇವರು–ದಿಂಡರು – ಶಾಸ್ತ್ರೀ – ಶಾಪುರುಷ, ಅಪ್ಪ ನಟ್ಟ ಹಿಪ್ಪೆಯ ನೆರಳು – ಬಿಸಿಲು ಕುದುರೆ – ಸಾಲ – ಶೂಲ, ಪ್ರೇಮದ ಅಂಕುರಾರ್ಪಣ – ಶೋಷಣ, ಕ್ರಾಂತಿ–ಕಾರಾಗೃಹ, ಪ್ರೇಮಪಂಜರ, ಕ್ರಾಂತಿ – ಕಾರಾಗೃಹ; ಒಲವಿನ ಬೋನು – ನಲಿವಿನ ಗೂಡು, ಹಕ್ಕಿ ಹಾರುತಿದೆ; ಪುನಃ ಪ್ರೇಮ; ಇದು ಪ್ರೇಮವೋ ಕಾಮವೋ?, ಅಪ್‌ಸರೆಯೋ? ಡೌನ್‌ಸರೆಯೋ, , "ಥೂ,

ನಿನ್ನ ಮನೆ ಹಾಳಾಗ'', ಗೆದ್ದಿ. (318 ಪುಟದ ನವನವೀನ ವಿಚಾರ ಪ್ರಚೋದಕ ಗ್ರಂಥ)

7. ತಬ್ಬಲಿ – ಕಜ್ಜಿ – ಕರೀಪೇಟಿ, ಸೋದರಮಾವನ ದುರಹಂಕಾರ, ಜಾಗೀರ್ದಾರರ ಮಗಳು ; ರೈತರ ಗೋಳು, ಕಿಸಾನ್ ಮಸ್ದೂರ್, ಪ್ರೇಮಯಾತನೆ ; ಆಸ್ಪತ್ರೆ – ಕಾಕಿಬಟ್ಟೆ – ಸಂಸಾರದಲ್ಲಿ ಸಾರವೇ ಇಲ್ಲ, ನಡೆಮುಂದೆ – ನಡೆ ಮುಂದೆ – ನಡೆ ಮುಂದೆ, ಪ್ರೇಮಯಾತನೆ (2). ಕೈದಿ – ಹೆಣ್ಣು ಜೀವ – ಪತಂಗ ; ಯಾತನೆ (3) ಹೊಳೆಯ ನೀರು ತಣ್ಣಗೆ, ಹೆಂಡ – ಹೈದ–ಹಾ ! (347 ಪುಟದ ಹೃದಯವಿದ್ರಾವಕ ಪ್ರಗತಿ ಪುಸ್ತಕ)

8. ಗುಲ್ಲು – ಗಲ್ಲು – ಚಳುವಳಿ – ಸಂಪು ; ಕಂಡವರ ಒಡವೆ – ಪರಶಾರಿಯರ ಪತನ, ಧ್ವಜಾರೋಹಣ ; ಆಸತ್ತು ಬೇಸತ್ತು – ಬೇವಾರ್ಸಿಹೆಣ, ಮುಸುಕಿನೊಳಗಣ ಮದನ, ಕುತಂತ್ರ–ಕಾರಭಾರ, ಲಚ್ಮಿ ಎಲ್ಲಿಂದ ಬಂದಳು ಬಸ್‌ಸ್ಟಾಂಡಿಗೆ ?, ಕಾವೀಬಟ್ಟೆ – ಏಕಾಂತೋಪದೇಶ – ವೇದನೆಯ ಜ್ವಾಲಾಮುಖಿ – ಮೇಡಮ್ಮನವರು – ಒಬ್ಬ ತರುಣಿಗಾಗಿ ಸಾಯುವುದೆ ? ; ಓರೆಗಣ್ಣು – ನೆರೆಸಂಸಾರ – ಆದರ್ಶಸಾಧನೆ ! (433 ಪುಟದ ಬೃಹತ್ಕಾದಂಬರಿ)

ಒಳ್ಳೆಯ ಬೇಡಿಕೆ

ತಮ್ಮಾ ! ಕನ್ನಡವನ್ನು ಕೊಂದು ಬೇರೆ ಭಾಷೆಗೆ ದಾಸರಾದಾಗ ಕನ್ನಡಮ್ಮನ ಕಣ್ಣಿಂದ ರಕ್ತದ ಹನಿಗಳು ಉದುರುವುವೆಂಬುದನ್ನು ನೆನಪಿಡು. ಕನ್ನಡದ Initials ಹಾಕಿ ಹೆಸರು ಬರಿ... ......

—ಇತಿ ಟಿ ಎಂ. ಆರ್ ಸ್ವಾಮಿ

ತೌರ್ಮನೆ ಬಡಾಯಿ

ತಮನ್ನುತ್ರ ಬೀರ್ಬೇಡಿಕ್ಕೈ !!

* * *

ಹೆಣ್ಣಿನ ಬಾಳು

ಪುಟ್ಟದೊಂದು ತೊಟ್ಟಿಲು. ಅದಕ್ಕೆ ನೀಲಿ ಬಣ್ಣದ ಸೊಳ್ಳೆಪರದೆ. ಕೋಣೆಯಲ್ಲಿ ಹೊಳೆಹೊಳೆವ ಹೊಸ ಕುರ್ಚಿಗಳು ಎರಡು, ಪುಟ್ಟ ಪುಟ್ಟ ದಿಂಬುಗಳು ಸಹಿತ. ಮೇಜಿನಮೇಲೆ, ನಾಲ್ಕೈದು ಆಟದಸಾಮಾನುಗಳು . ಗಿಲುಗಿಲುಕಿ, ರಬ್ಬರ್‌ಗೊಂಬೆ, ಬಸವ, ಹಾಲಿನಶೀಷ

ಬಲಗಡೆಯ ಕುರ್ಚಿಯೊಂದರಲ್ಲಿ, ದಿಟ್ಟತನದಿಂದ ನೆಲವನ್ನೇ ನೋಡುತ್ತ, ಒಬ್ಬಾಕೆ ಕುಳಿತುಕೊಂಡಿದಾಳೆ , ತಾಯಿ , ಸುಮಾರು 28-29 ವರ್ಷ ವಯಸ್ಸಿರಬಹುದು, ಸುಂದರಿ. ಆಕೆಯ ಮುಖದಮೇಲೆ ಭಾವನಾತರಂಗಗಳು ಒಂದರ ಹಿಂದೊಂದು ಮಿಂಚಿ ಮಾಯವಾಗುತ್ತಿವೆ. ಅಕೊ ! ಅವಳ ಅಂತರಾಳದಲ್ಲಿ ಯಾವುದೋ ಸಿಡಿಲು ಬಡಿದಂತಿದೆ.

ಮೆಲ್ಲಮೆಲ್ಲನೆ ಅವಳ ಮುಷ್ಟಿಯ ಬಿಗಿ ಸಡಿಲವಾಯಿತು. ಅದರೊಳಗಿಂದ ಪತ್ರವೊಂದು ನೆಲಕ್ಕೆ ಬಿತ್ತು. ಅದನ್ನೆತ್ತಲು ಅವಳು ಪ್ರಯತ್ನಿಸುವುದಿಲ್ಲ.... ಅದು, ಅವನಕಾಗದ. ಅವನ ಕಟ್ಟಕಡೆಯ ಕಾಗದ. ಕೆಲವೇ ಕೆಲವು ಮಾತುಗಳನ್ನು ಬರೆದಿದಾನೆ ಎಲ್ಲವೂ ಕಿವಿಗೆ ಕಠೋರ, ಮನಕ್ಕೆ ಶೂಲ. ಅವು ಅವಳ ಕಣ್ಣಿಗೆ ನಿರಾಶೆಯ ಕತ್ತಲನ್ನು ಕಟ್ಟಿದುವು....ಇನ್ನುಮುಂದೆ, ಅವಳಿಗೆ ಏಕಾಂತ ಜೀವನ, ಅಸಹಾಯ ಸಂಸಾರ.

ಯಂತ್ರದ ಗೊಂಬೆಯಂತೆ, ಅವಳು ಎದ್ದು ನಿಂತಳು. ಮುಂಗುರುಳನ್ನು ಹಿಂದಕ್ಕೆ ಸರಿಸಿದಳು. ಕಣ್ಣುಗಳು ಭಯದಿಂದ ಅರಳಿದುವು ನರಕ್ಕನೆ, ತೊಟ್ಟಿಲಕಡೆ, ಧಾವಿಸಿದಳು ಸೊಳ್ಳೆಪರದೆಯನ್ನು ಇಬ್ಭಾಗಮಾಡಿ, ತಲೆ ಬಗ್ಗಿಸಿದಳು. ತುಟಿಗಳಗಲಿದುವು , ನಿಟ್ಟುಸಿರಿಟ್ಟಳು

" ಚಿನ್ನಾ ? ಅವರಿನ್ನು ಬರುವದಿಲ್ಲವಂತೆ ಕೇಳಿಸಿತೆ, ಚಿನ್ನಾ ! ನಮ್ಮಿಬ್ಬರನ್ನೂ ಹಾಳುಬಾವಿಗೆ ನೂಕಿದರು. ನಾವು ಬೇಡವಂತೆ ಅವರಿಗಿನ್ನು .... ಅಯ್ಯೋ ! ನಾವಿಬ್ಬರೂ ಇನ್ನು ಯಾರಿಗೂ ಬೇಡವಾದ ಪದಾರ್ಥಗಳು ! " ಎಂದು ಹಲುಬಿದಳು. ತೊಟ್ಟಿಲೊಳಗಿಂದ ಪುಟ್ಟ ಕೈಯೊಂದನ್ನು ಹೊರಕ್ಕೆಳೆದು ಕಂಬನಿಯಲ್ಲಿ ತೋಯಿಸಿದಳು. " ಇನ್ನು ಬರುವುದೇ ಇಲ್ಲ........ನಿನ್ನನ್ನು ಮುದ್ದಾಡಿಸುವುದಕ್ಕೆ. ಬೇರೊಬ್ಬಳ ಜೊತೆಗೆ ಓಡಿಹೋಗಿದಾರೆ ಅವರು.........

ದೂರ.... ಬಹುದೂರ!.... ನನ್ನನ್ನ.... ನಿನ್ನನ್ನ.... ಅಯ್ಯೋ!" ಎಂದು ಚೀರಿದಳು. ಒಂದು ಕುರ್ಚಿಯಮೇಲೆ, ಕುಸಿದಳು.

'ಕಟ್'—ಎಂದು ಕೂಗಿದರು, ಡೈರೆಕ್ಟರು. ಕ್ಯಾಮರಾಗಳೆಲ್ಲ ಕಣ್ಣುಮುಚ್ಚಿದುವು. ಆರ್ಕ್‌ದೀಪಗಳೆಲ್ಲ ಕುರುಡಾದುವು. ಮೈಕ್‌ಗಳೆಲ್ಲ ಮೂಕವಾದುವು. ಸ್ಟೂಡಿಯೋ ಕೆಲಸಗಾರರು ಮತ್ತೆ ಚೇತನಗೊಂಡರು.

ಅವಳು ಕುರ್ಚಿಯಿಂದ ಎದ್ದಳು. "ಆ ಹಾಳು ಕೂಸನ್ನೆತ್ತಿಕೊಂಡು ದೂರಸಾಗಿಸಿ ಬೇಗ! ಕಿರಲಿದರೆ, ಕಿವಿ ಒಡೆದು ಹೋಗುತ್ತೆ" ಎನ್ನುತ್ತ ಅವಳು ಪಕ್ಕದ ಕೋಣೆಯೊಳಕ್ಕೆ ಓಡಿದಳು.

ಅಲ್ಲಿದ್ದ ಫೋನನ್ನೆತ್ತಿ ಕಿವಿಬಾಯ್ಗಳಿಗಿಟ್ಟು, ತನ್ನ ಲಾಯರನ್ನು ಮಾತನಾಡಿಸಿದಳು, ಅವಳ ನಾಲ್ಕನೆಯ ವಿವಾಹದ ವಿಚ್ಛೇದನದ ವಿಷಯವಾಗಿ.

—ಶ್ರೀ. ರುದ್ರಮ್ಮ.

ಸುಭಾಷಿತ ರತ್ನಾನಿ

ಪದವೀ ದದಾತಿ ಪವರಂ
ಪವರಾದ್ಯಾತಿ ಲಂಚತಾಂ
ಲಂಚತ್ವಾತ್ ಧನಮಾಪ್ನೋತಿ
ಧನಾತ್ ಸರ್ವ ಸುಖಂ ಲಭೇತ್ ||

ಬುಕ್ಕಾನಾಂ ರೀಡನೇ ಕಷ್ಟಂ
ರೀಡಿತಾನಾಂ ರಿಮೆಂಬ್ರಣೇ
ರೈಟನೇ ಸ್ಪೀಕನೇ ಕಷ್ಟಂ
ಸರ್ವಂ ಕಷ್ಟಮಿದಂ ಜಗತ್ ||

—ವಿ. ಸತ್ಯನಾರಾಯಣ.

ರೋಗಿಯ ಕೂಗು

ರಾಗ–ಬೇಗಡೆ. ತಾಳ–ರೂಪಕ.

ಆವ ರೋಗವು ಎನಗೆ ? ಹೇಳಿ ಬಿಡಿ, ಸ್ವಾಮಿ !
ಸಾವಧಾನದಿ ಎನ್ನ ಕೈಪಿಡಿದು ನೋಡೀ ! !

ಜಗ ಭಂಡರಾ ಸೊಬಗು ಕಂಗಳಿಗೆ ಕಾಣಿಸವು,
ಹೊಗಳು ಗೀತವ ತಾಳದೆನ್ನ ಕಿವಿಯು.
ಕೆಟ್ಟದೊಳ್ಳೀದೆಂಬ ಭೇದಗಳು ತಿಳಿವಷ್ಟು
ಹುಟ್ಟು ಮೇಲ್ ಕೀಳುಗಳ ಕಾಣಲಾರೆ ! ೧

ಕಿರಿಹಲ್ಲು ಕುಸ್ತೋತ್ರ ಬರದೆನ್ನ ಬಾಯಿಗೇ
ಕುರಿಯ 'ಬ್ಯಾ' ಕಂಠದಿಂ ಹೊರಹೊರಡದು.
ನರಪಾದ ಸೇವೆಗೀ ಹಸ್ತಗಳು ಚಲಿಸವು
ಬರಿ ಚಾಡಿಕೋರರಿಗೆ ಶಿರಬಾಗದು. ೨

ಮದವಂತರೆಂಜಲನು ಘ್ರಾಣಿಸದು ನಾಸಿಕವು
ಅಧಿಕಾರಿ ಬಂಗಲಿಗೆ ಕಾಲೇಳದು.
ಕಸ-ಕೋಪ-ವಿಷ ಬರೆದು ಮತಭೇದ ಕೋಮುಕಲ್–
ಮಷ ತುಂಬದೀ ಹಾಳು ಕೈಗೇನು ಕೇಡು ? ೩

ಸುತ್ತಲೂ ಕುಹಕಿಗಳು ಸುಖದಲೋಲಾಡುವರು ,
ಕುತ್ತವೇನಿದು ? ಪತ್ತೆ ಮಾಡಿಕೊಡಿ, ನನಗೆ !
ಆವ ರೋಗವು ಬಂತು ಕಾಡುತಿದೆ, ಸ್ವಾಮಿ !
ಸಾವಧಾನದಿ ನನ್ನ ಕೈಪಿಡಿದು ನೋಡಿ ೪

—— o ——

"ಹೇಳಿ ಬರೆಯಿಸಿ" ಪಾಠ

(ಉಪಾಧ್ಯಾಯರುಗಳಿಗಾಗಿ)

ಕ್ರ್ಯೂವೋಮರ್ರ್ರೊ	ಗೋಳಾಯಮಾನ
ದುರ್ನಾಥ	ಶೂಲಂಕಷ
ಗಜೇಂದ್ರರೋಗ	ವಿಯತ್ನಂ
ಅಸಲುಚಕ್ರಿ	ಬೇಜವಾಬ್ದಾರಿ

ಒಂದು ದಿನ ಒಂದು ಹುರಿಮುರಿ ಪಾದ ಹರಿಹಾರಕ್ಕಾಗಿ ಕೊಳೆಗೆ ಹೋಯಿತು ತನ್ನಷ್ಟಕ್ಕೆ ತಾನೇ ಕೀರು ನುಡಿಯುತ್ತಿತ್ತು. ಆಗ, ಬಸಿವಿನಿಂದ ಹಳಲಿ ಬೆಂಗಾಡಿ, ಎದ್ದಾಲರೂ ಕೊಂಸ ಮಾಂಚ ಸಿಗಲು ಅದೆಲಾಡುತ್ತಿದ್ದ ಹೋಳ ನೊಂದು ಅದರ ದಡದಲ್ಲಿ ತೊಂಚು ಹಾಕುತ್ತಿತ್ತು. ನಿಷ್ಕಾಗಣವಾರಿ, ಕುರಿ ಬಲಿಯ ಮೇರೆ, ಮಿದ್ದು, ಅಲನ್ನು ತಿದ್ದಲು, ಮೋಳನಿಗೆ ತನ ಬರಲಿಲ್ಲ. ಆದ್ದರಿಂದ, ಅದು, ಆ ಪ್ರಾಧುಸಾಣಿಯೊಂದಿಗೆ ಪ್ರಜಳಗಾರಂಭಿಸಲು ಪನೆ ಹುಡುಕಿತು. ನಾನು ಕುನಿಯುವ ನೀಡನ್ನು ನೀಲು ಕನಕಿ ಕದಡಿಸುತ್ತಿ, ಎಂದು ಬೆದರಿಸಿತು. ಆಗ, ಮರಿತುರಿ, "ಅಯ್ಯಾ! ಕೋಳನೆ, ನೀನು ನಿಂಕಿರುವ ತಡೆಯಿಂದ, ಕೊಳೆ ನನ್ನ ಹಡೆಗೆ ಬರುತ್ತೆ. ನಾನು ಕನಡಿದ ದೀರು ನಿನ್ನ ಕರೆಗೆ ಏಡುವುದೆಂತು?" ಎಂದಿತು. "ಲೋ! ಅಧಿಗಪ್ರಂಕಂಸಿ! ಬುಚ್ಚುಮಾಯಿ! ನೀನು ನನ್ನನ್ನು ರೂಮು ವರ್ಷಗಳಿಂದಲೂ, ಮಿಾನಾಹಾನ ವಾಗಿ ಅಳವೇಹನಮಾಡಿರುವೆ! ಎಕ್ಕರಿಚೆ!" ಎಂದು ಗದರಿಸಿತು. "ನಾನು ಹುನ್ನಿ, ಇಟ್ಟೊ, ರೂಮುಗಿಂತಳಿಲ್ಲ," ಎಂದು ಚುರಿಮುರಿ ಅಂಕಲಾಗಿತು. "ನೀನಲ್ಲದಿದ್ದರೆ, ನಿನ್ನ ನಾತ ಬನ್ನನ್ನು ತೂಷಿಸಿರಬೇಕು. ಈತಲೇ, ಅದಕ್ಕೆ ಗಕ್ಕ ಹರಿಪಾರ ಕೊಡು," ಎಂದು ಗೇರಿ, ಕೋಳ ತುರಿಯ ಮೇದೆ ಬಿಲ್ಲು, ಅದನ್ನು ತೊಂದು ದಿಂಕಿತು.

———೦———

ಅಕ್ಕಿರೇಷನ್ನನ್ನು ಹೆಚ್ಚಿಸಿ, ಬಟ್ಟೆ ರೇಷನ್ನನ್ನು ಕಡಮೆಮಾಡಿರುವುನ್ನು ನೋಡಿದರೆ,......ಒಂದಕ್ಕೊಂದು ಹೊಂದುವುದಿಲ್ಲವಲ್ಲಾ!

* * *

ಹೊಗೆ ಸೊಪ್ಪು

ಬುರುಡೆಯೊಳಗೆ ಕಿಂಚಿತ್ತಾದರೂ ಬಿಳಿ ಪದಾರ್ಥ ಇರುವ ಯಾವ ಯುವಕನೂ ಇಂದಿನ ಇಂತರಿಂ ಭಾರತದಲ್ಲಿ ಹಸಿವಿನಿಂದ ನರಳಬೇಕಾಗಿಲ್ಲ, ಎಂಬುದಕ್ಕೆ ನಾನೇ ದೊಡ್ಡ ಉದಾಹರಣೆ.

ಲಾಗಾಯ್ತಿನಿಂದಲೂ ನಾನೊಬ್ಬ ಸಿಗರೇಟ್ ಸೇದಿ. ನನ್ನದು ಸರಪಣಿ ಸ್ವಭಾವ. ಆದ್ದರಿಂದ ನಾನೊಂದು ಸಿಗರೇಟ್ ಕಂಪನಿಗೆ ಸೇರಿಕೊಂಡೆ....ಹೊಗೆಯೆಳೆದು ರುಚಿನೋಡುವ ಕೆಲಸ, ಚಮತ್ಕಾರದ ಚಾಕರಿ. ತರತರದ ಕಸವನ್ನು ರಸಮಯ ಮಾಡಬಲ್ಲ ಬ್ಲೆಂಡರ್ ಮಹಾಶಯ ನನಗೆ ಕುರ್ಚಿಕೊಟ್ಟು, "ನಮ್ಮ ಕಂಪನಿ ಮಾಲನ್ನು ಉತ್ತಮಪಡಿಸುವ ವಿಧಾನ ತಿಳಿಸಿರಿ" ಎಂದ. ಮೆದುಳನ್ನಲ್ಲಾಡಿಸಿದೆ, ಒಂದಿಷ್ಟು ಸ್ಫೂರ್ತಿ ಹೊರಬಂತು.

"ಬೂದಿ ಇಲ್ಲದ ಸೇದು ಕಡ್ಡಿ ಮಾಡಯ್ಯ" ಎಂದೆ. ಆತನಿಗೆ ಕೆಚ್ಚೇರಿತು. ನೂರಾರು ಸಾಂಪಿಳುಗಳನ್ನು ನನ್ನ ಮುಂದಿರಿಸಿದ. ನಾನು 'ಊ ಹುಂ', 'ಪರವಾಗಿಲ್ಲ', 'ಕೊಂಚವಾಸಿ', 'ಏ, ವನ್' ಎಂದು ಮೆಚ್ಚುತ್ತಾ ಬಂದೆ. ಕೊನೆಗೆ ಒಂದು ಬ್ರಾಂಡನ್ನು ಜಯಪ್ರದವಾಗಿ ಮಾಡಿದ! ನನ್ನ ಸಂಬಳ ಮುಮ್ಮಡಿಯಾಯಿತು.

ಆಗ ಅವರಿಗೆ ಇನ್ನೊಂದು ಸಲಹೆಕೊಟ್ಟೆ. "ತುದಿ ಉರಿಯುತ್ತಿರಬೇಕು; ಸೋಕಿದರೆ ಸುಡಬಾರದು" ಎಂದೆ. ಕೋಟ್ಯಾಂತರ ರೂಪಾಯಿ ಲಾಭಗಳಿಸಿರೊ, ಎಂದೆ. ಆರು ತಿಂಗಳ ಪರಿಶ್ರಮದಿಂದ, ಅದನ್ನೂ ಸಾಧಿಸಿದರು. ನನ್ನ ಸಂಬಳಕ್ಕೆ ಎರಡು ಸೊನ್ನೆ ಸೇರಿತು.

ಡೈರೆಕ್ಟರುಗಳೆಲ್ಲರೂ ನನ್ನನ್ನ ಕರೆಸಿ ಕೈ ಕುಲುಕಿದರು. 'ಇನ್ನೊಂದು ಯೋಚನೆ ಹೇಳಪ್ಪ, ದಯವಿಟ್ಟು' ಎಂದರು. ಹೇಳಿದೆ. "ಬಲು ನಿಧಾನವಾಗಿ ಉರಿಯಬೇಕು. ಅರ್ಧಸೇದಿ ಒಂದುಕಡೆ ಇಟ್ಟುಹೋದರೆ, ಆರುತಿಂಗಳ ಅನಂತರ ಮತ್ತೆ ಹೊತ್ತಿಸದೆ ತೆಗೆದು ಬಾಯಿಗಿಟ್ಟುಕೊಳ್ಳುವ ತರಹದ್ದು" ಎಂದೆ. ನನ್ನನ್ನು ತಬ್ಬಿಕೊಂಡರು, ಪುಣ್ಯಾತ್ಮರು. ನನ್ನ ಭುಜ (4ನ್ನೂ) ತಟ್ಟಿದರು. ಆ ಬ್ಲೆಂಡರ ಭುಜಾನೂ ತಟ್ಟಿರಪ್ಪ, ಎಂದೆ. ಹತ್ತಾರು ಸಾಂಪಿಳುಗಳನ್ನು ಉರಿಸಿ ಇರಿಸಿ ಪರೀಕ್ಷಿಸಿದೆ. ಕಡೆಗೆ, ಭಲೆ, ಎಂದೆ.

ನನ್ನದೊಂದು ಶಿಲಾಪ್ರತಿಮೆಮಾಡಿ, ಕಾರ್ಖಾನೆ ಬಾಗಿಲಲ್ಲಿ ನಿಲ್ಲಿಸಿದರು.

ಮೊನ್ನೆ, ಅಂದರೆ, ಕಳೆದ ತಿಂಗಳು, ಕಂಪನಿ ಜನರಲ್ ಮ್ಯಾನೇಜರು ನನ್ನನ್ನ ಅವರ ಅಳಿಯದೇವರಾಗಿ ಪ್ರತಿಷ್ಠೆಮಾಡಿದರು, ಅವರ ಮನೆಯಲ್ಲೇ.

ಆ ಹುಡುಗಿಗೆ ಹೊಗೆಯೆಂದರಾಗದು !....ಆಗ, ನನಗಿನ್ನೊಂದು ಯೋಚನೆ ಹೊಳೆಯಿತು. ಕರೆಸಿದೆ, ಬ್ಲೆಂಡರನ್ನು, "ನೋಡಿರಿ ! ನಾಲಗೆ ನಲಿಯಬೇಕು ! ಗಂಟಲು ಗುಟುರು ಹಾಕಿಕೊಂಡು ಕುಣಿಯಬೇಕು. ಮೆದುಳು ಮೋದಗೊಳ್ಳಬೇಕು. ಆತ್ಮ ಆನಂದದಲ್ಲಿ ತಲ್ಲೀನವಾಗಬೇಕು. ಅಂಥ ಸಿಗರೇಟು ಮಾಡಬೇಕು. ಆದರೆ, ಕೇಳಿ ಇಲ್ಲಿ !....ಸೊಪ್ಪಿನ ಗಪ್ಪು ಜಪ್ ಅಂತ ಬಾಯಲ್ಲೇ ಅಡಗಬೇಕು. ವಾಸಣೆ ಇತರರಿಗೆ ಗೊತ್ತಾಗಬಾರದು. ಹೊರಬರುವ ಹೊಗೆ ಕಣ್ಣಿಗೆ ಕಾಣಿಸಬಾರದು !....ಮಾಡಿ, ಮತ್ತೆ !" ಎಂದೆ.

ಆತ ತಲೆ ಕೆರೆದುಕೊಂಡೇ ಹೊಸಲು ದಾಟಿದ. ನಿನ್ನೆದಿನ ಅಂಥ ಸಿಗರೇಟು ಸಿದ್ಧವಾಯಿತು ! ನಾಳೆ ವ್ಯಾಪಾರಕ್ಕೆ ಬರುತ್ತೆ............ಕಾದಿರಿ.

—ದಾಟೋಳಿ.

—o—

ಭೋಜ ರಾಜನ್ಪ್ರಭಾವ ಬಿಜ್ಜಿಗೆ ಭಾಪು !
ಭೋಜ ರಾಜನ ಪ್ರಭಾವ – ಬೊಜ್ಜಿಗೆ ಮೇಪು ! !

*　　*　　*

ಲಾಯರಿ – ಕಕ್ಷಿಗಾರನಿಗೆ
ಕಟ್ಟು ನಮ್ಕಟ್ಟು –
ಕಾಡು – ನಿಮ್ಮಾಡು –

*　　*　　*

ನಿನ್ನ Hat ಆಟಿಟಕೆ—ನಿನ್ನ Suit ಆಟಿಕೆ – Patent Book ಆಟಿಕೆ –ಬೇಯೋದಿಲ್ಲಾ ಮಗು ? (Fixing his right hand to his Brain Pan) ಈ ದೊಡ್ಡೆಲೇಲಿ – ಈ ಖೋಟಾ ಬೇಳೆ – ಬೇಯೋದಿಲ್ಲಾ !— Mix some more Soda Lut in ಪುಡಿ !

*　　*　　*

ಸೊಳ್ಳೆ ಕೊಲ್ಲೋಕ್ಸುತ್ಗೇನೇ !
ಬೆದರಿದ್ದೆಲ್ಲಾ ಭೇತಾಳ—ಗದರಿದ್ದೆಲ್ಲಾ ಗೊಗ್ಗಯ್ಯ

*　　*　　*

ವಿತಂತ್ರ—ಕರ್ನಾಡು

“ ವಿಚಿತ್ರವಾದ ಮತ್ತು ಆಶ್ಚರ್ಯಕರವಾದ ಸುದ್ದಿಗಳು ತಿಳಿಯಬರುತ್ತವೆ ನಿಮಗೆ ” ಅಂತ ವಾರಭವಿಷ್ಯದಲ್ಲಿ ಅವನು ಬರೆದದ್ದು ಸರಿಯೆ ಎನ್ನಿಸಿತು. ಏಕೆಂದರೆ ನಾನು ವಾಚನಾಲಯಕ್ಕೆ ಹೋದಾಗಲೆಲ್ಲಾ ಆ ‘ವಿತಂತ್ರಕರ್ನಾಡು’ ಪತ್ರಿಕೆ ಬಿಟ್ಟು ಬಾಕೀ ಯಾವುದೂ ಖಾಲಿಯಿರುವುದಿಲ್ಲ. ಮೊನ್ನೇನೂ ಹಾಗೇ ಎಲ್ಲರಿಗಿಂತ ಮುಂಚೆ ಅಂತಲೇ ಹೋದರೂ ಯಥಾ ಸಿಕ್ಕಿದ್ದು “ವಿತಂತ್ರ ಕರ್ನಾಡೇ ’. ಆ ಧಾರವಾಡದ ಭಾಷೆ ಅಂದರೆ ನನಗೆ ಅಭಿಮಾನ ಅಷ್ಟಕ್ಕಷ್ಟೇ ಆದರೂ, ಹೆಡ್‌ಲೈನ್‌ಗಳನ್ನಾದರೂ ನೋಡೋಣ ಅಂತ ಮುಖಕ್ಕೆ ಅಡ್ಡ ಹಿಡ್ಕೊಂಡು ಕೂತೆ.

‘ ವ್ಹಾಯಸರಾಯರು ಲಂಡನಕ್ಕೆ ವಿಮಾನದಲ್ಲಿ ಹಾರಿಹೋದರು ’ ಅನ್ನೋ ಶಿರೋನಾಮೆ ಬಹಳ ಸ್ವಾರಸ್ಯವಾಗಿ ಕಂಡಿತು. ವ್ಹಾಯಸರಾಯರು ಸ್ವತಃ ಹಾರಬಲ್ಲರಾದರೂ ಲಂಡನ ಬಹಳ ದೂರವಾದ್ದರಿಂದ ವಿಮಾನ ಹಿಡಿದಿರ ಬೇಕೆಂದುಕೊಂಡು ಮುಂದೆ ಓದತೊಡಗಿದೆ.

‘ ರಶಿಯನ್ ಪ್ರತಿನಿಧಿ ವಿಷನಿಸ್ಕಿಯವರು ಪ್ಯಾರಿಸದ ಶಾಂತಿ ಮೇಳದಲ್ಲಿ ಜರ್ಮನ್ ಜನದಮೇಲೆ ವಿಷಕಾರುತ್ತಿರುವುದನ್ನು ಗಮನಿಸಿದರೆ ಜರ್ಮನ ನಾಗರೀಕತೆಯ ತಿಥಿಯಾದಂತೆಯೇ ಸರಿ ’ ಎಂಬುದನ್ನು ಓದಿದಮೇಲೆ ನನ್ನ ಕುತೂಹಲ ಕೆರಳಿತು. ಉತ್ತರ ಕನ್ನಡಭಾಷೆಯಲ್ಲಿ ನನಗೆ ಒಂದು ರಖಂ ಅಭಿಮಾನದ ಮೊಳಕೆ ಎದ್ದಿತು. ಮುಂದಿನ ಕಾಲಮು ನಮ್ಮೂರು ಸುದ್ದಿ : ಹೀಗಿತ್ತು—

‘ ಬೆಂಗಳೂರು ಸುದ್ದಿ.’

‘ ಬೆಂಗಳೂರು ದಂಡ ತಾ|| ....46 ......ಅಂತ ಇತ್ತು.
ಇದನ್ನು ನೋಡಿ ನನಗೆ ಕೋಪಬದ್ದೊಂದು ಕಿಡಿ ಸಿಡಿದರೂ, ಅವನು ನಮ್ಮೂರನ್ನು ಈ ನವೀನ ರೀತಿಯಲ್ಲಿ ತೆಗಳಿದ್ದನ್ನು ಗಮನಿಸಿ, ನಗುಮುಗುಳೊಂದು ಚಿಮ್ಮಿ ಸಮಾಧಾನಮಾಡಿತು........ಮುಂದಿನ ಪುಟ ತೆಗೆದೆ.

‘ ಅ. ಹಿಂ ಸೇ. ಶಿಬಿರಗಳಲ್ಲಿ ಅತ್ಯಾಚಾರ ’ ಎಂಬ ತಲೆಯ ಕೆಳಗೆ ‘ ಅಜಾದ್ ಹಿಂದ್ ಸೇನಾ ಶಿಬಿರಗಳಲ್ಲಿರುವ ಖೈದಿಗಳಮೇಲೆ ಸರ್ಕಾರದ ಅತ್ಯಾಚಾರವನ್ನು ವಿವರಿಸಿತ್ತು.

‘ ಸಂಪಾದಕೀಯ ‘ಪತ್ರವ್ಯವಹಾರ ’ದಲ್ಲಿ ಒಬ್ಬ ಮಹನೀಯ ತಮ್ಮ ಕೋಮಿನವರಿಗೆ ಶವಸಂಸ್ಕಾರಕ್ಕೋಸ್ಕರ ಒಂದು ಪ್ರತ್ಯೇಕ ಜಮೀನಿಗಾಗಿ

ಪ್ರಾರ್ಥಿಸಿಕೊಂಡು ಒಂದು ಪತ್ರ ಬರೆದಿದ್ದ. ಪತ್ರದ ಕೆಳಗೆ ಅವನ ಹೆಸರೂ ಇತ್ತು. ಆತನ ಹೆಸರಿನ ಅಕ್ಷರಗಳ ಮಧ್ಯೆ ಸಂಪಾದಕರು ಕೇವಲ ಒಂದೇ ಒಂದು ಚುಕ್ಕಿ ಸೇರಿಸಿ ' ಕೇ.ಶವಯ್ಯ ' ಅಂತ ಮಾಡಿದ್ದು, ಆ ಪತ್ರಕ್ಕೆ ತಕ್ಕಕಳೆ ಕೊಟ್ಟಿತ್ತು. ನಮ್ಮಲ್ಲಿಯ ಸಂಪಾದಕರಿಗೂ, ಅತ್ತಕಡೆಯವರಿಗೂ ತಾರತಮ್ಯ ಎಲ್ಲಿದೆ ಅಂತ ಆಗ ಗೊತ್ತಾಯಿತು.

ಸಂಪಾದಕೀಯದಲ್ಲಿ— ' ದುಸ್ವಾಥ್ಯವೆಂದು ತೀರ್ಮಾನವಾದ ಹಿಂದೂ-ಮುಸ್ಲಿಂ ಐಕ್ಯತೆಯ ವಿಷಯದಲ್ಲಿ ವೇವುಲ್ಲಿಗೆ ಇನ್ನೂ ಇರುವ ನಂಬಿಕೆಯನ್ನು ವಿವರಿಸುತ್ತಾ ; " ಗಾಂಧಿ - ಜಿನ್ನಾ ಮಾತುಕತೆ ಮುರಿದು ಬಿದ್ದರೂ, ಒಂದು ಚೂರು ರೊಟ್ಟಿಗಾಗಿ, ವ್ಹಾಯಸರಾಯರು ' ಕಾ ಕಾ ' ಎನ್ನುವುದನ್ನು ಬಿಟ್ಟಿಲ್ಲ " ಎನ್ನುವುದೂ ಪ್ರಸಂಶನೀಯವಾಗಿಯೇ ಇತ್ತು. ಅದೇ ಪುಟದ ತಟ್ಟೆತಳದ ಪುಟಾಣಿ ಮೂಲೆಯಲ್ಲಿ ಇನ್ನೊಂದು ' ಚಕಲಗುಲಿ ' ಇತ್ತು........

" ಸಮಾಜದಲ್ಲಿ ಸ್ತ್ರೀಯರ ಸ್ಥಾನ " ಎಂಬ ವಿಷಯದಮೇಲೆ ಶ್ರೀಮತಿ.... .. ....ವರು ಭಾಷಣ ಮಾಡಿದರು ಎಂದು ನೆನ್ನೆ ಪೇಪರಿನಲ್ಲಿ ಪ್ರಕಟವಾದ ಸುದ್ದಿಯನ್ನು ' ....ಸ್ತ್ರೀಯದಸ್ಥಾನ' ಅಂತ ತಿದ್ದಿಕೊಳ್ಳಿ ".

ಅಷ್ಟುಹೊತ್ತಿಗೆ ಬಾಕೀ ಪೇಪರುಗಳು ಖಾಲಿಯಾಗಿದ್ದರೂ ಅದನ್ನೇ ಎರಡು ಸಾರಿ ತಿರುವಿಹಾಕಿದೆ. ಆ ಪತ್ರಿಕೆಯ ಸ್ವಾರಸ್ಯವನ್ನು ಎಲ್ಲರಿಗೂ ಹೇಳಿದೆ ..ನಮ್ಮ ವಾಚನಾಲಯಕ್ಕೆ ಈಗ ಎರಡು ಕಾಪಿ ಬಂದರೂ ' ವಿತಂತ್ರ ಕರ್ನಾಡ'ನ್ನು ಎಲ್ಲರೂ ತಲೆ ಸಂದಿ ತಲೆ ಇಟ್ಟು ಓದುತ್ತಿರುತ್ತಾರೆ. ಅದಕ್ಕೆ ಪುರ್ರೊಸತ್ತೇ ಇಲ್ಲ. ಬಾಕಿ ಪೇಪರುಗಳೆಲ್ಲಾ ನಿದ್ದೆಮಾಡುತ್ತಿರುತ್ತವೆ.

—ಟೀಯಸ್ವಾರ್ರಾಚ್.

——— o ———

ನಾನು ಕರ್ಕೋಟಕ ! ಕೇವಲ ಕರ್ಕೋಟಕ !

ಕರ್ನಾಟಕದ ಕರ್ಕೋಟಕ – Motto ಗೊತ್ತೇನು

ಕೆಣಕ್ಬೇಡ – ಔರ್ – ಕೆದರ್ಬೇಡ !

*   *   *

---

*ಕಲಿಗನ್ನಡ ಸ್ಪರ್ಧೆ : ಸರಿಯಾದ ಉತ್ತರಗಳು :—

1 ಬೆ 2 ಗು 3 ಕೆ 4 ಡ 5 ತೆ 6 ಜೆ